
# ಕೊಕ್ಕೊ ಕೃಷಿ ಕಾಲ ನಿರ್ಣಯ

NATIONAL HORTICULTURE MISSION





ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ
(ಭಾರತೀಯ ಕೃಷಿ ಸಂಶೋಧನಾ ಪರಿಷತ್)
ಕಾಸರಗೋಡು - 671 124, ಕೇರಳ, ಭಾರತ.

ICAR

CPCRI

# ಕೊಕ್ಕೊ ಕೃಷಿ ಕಾಲನಿರ್ಣಯ





ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ

(ಭಾರತೀಯ ಕೃಷಿ ಸಂಶೋಧನಾ ಪರಿಷತ್)

ಪ್ರಾಂತೀಯ ಕ್ಷೇತ್ರ, ವಿಟ್ಲ - 574 243, ಕರ್ನಾಟಕ

ಮತ್ತು

ಗೇರು ಮತ್ತು ಕೊಕ್ಕೋ ಅಭಿವೃದ್ಧಿ ನಿರ್ದೇಶನಾಲಯ

ಭಾರತ ಸರಕಾರ, ಕೃಷಿ ಮಂತ್ರಾಲಯ

ಕೊಚ್ಚಿ - 682 011, ಕೇರಳ



ತಾಂತ್ರಿಕ ಪುರವಣಿ

**ಕೊಕ್ಕೊ ಕೃಷಿ ಕಾಲ ನಿರ್ಣಯ**

**ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ**
ಕಾಸರಗೋಡು ೬೭೧೧೨೪, ಕೇರಳ
ದೂರವಾಣಿ: ೦೪೯೯೪ ೨೩೨೮೯೩ ರಿಂದ ೨೩೨೮೯೬
ಫ್ಯಾಕ್ಸ್ : ೦೪೯೯೪-೨೩೨೩೨೨
ಇಮ್ಮೆಲ್ : cpcri@hub1.nic.in
ವೆಬ್‌ಸೈಟ್ : http://www.cpcri.nic.in

ಪ್ರಕಾಶನ
**ಡಾ। ಜೋರ್ಜ್ ವಿ. ಥೋಮಸ್**
ನಿರ್ದೇಶಕರು

ವಿಷಯ ಸಂಪಾದಕರು
**ಎಸ್. ಎಲ್ಯೆನ್ ಅಪ್ಸರ**
**ಡಿ. ಬಲಸಿಂಹ**
**ವೆಂಕಟೇಶ್ ಎನ್. ಹುಬ್ಬಳ್ಳಿ**

ಛಾಯಾಚಿತ್ರ ಮತ್ತು ವಿನ್ಯಾಸ
**ಮೋಹನ ಗೌಡ ಎಸ್. ಎನ್.**

ಸಹಾಯ
**ಗೇರು ಮತ್ತು ಕೊಕ್ಕೊ ಅಭಿವೃದ್ಧಿ ನಿರ್ದೇಶನಾಲಯ**
ಭಾರತ ಸರಕಾರ ಕೃಷಿ ಮಂತ್ರಾಲಯ, ಕೊಚ್ಚಿ
ರಾಷ್ಟ್ರೀಯ ತೋಟಗಾರಿಕಾ ಮಿಷನ್ ಅಧೀನ

**ದಶಂಬರ, 2007**

ಮುದ್ರಣ
**ಕೋಡ್‌ವರ್ಡ್ ಪ್ರೋಸೆಸಿಂಗ್ ಮತ್ತು ಪ್ರಿಂಟರ್ಸ್**
ಮಂಗಳೂರು

# ಕೊಕ್ಕೊ ಕೃಷಿ ಕಾಲನಿರ್ಣಯ

ಕೊಕ್ಕೊ - ಜಗತ್ತಿನ ಪ್ರಮುಖ ವಾಣಿಜ್ಯ ತೋಟದ ಬೆಳೆಗಳಲ್ಲಿ ಒಂದಾಗಿದೆ. ಮೂಲತಃ ದಕ್ಷಿಣ ಅಮೇರಿಕಾದ ಅಮೆಜಾನ್ ಪ್ರದೇಶಗಳಲ್ಲಿ, ಕಾಫಿ, ಚಹ ಬೆಳೆಗಿಂತಲೂ ಮೊದಲೇ ಒಂದು ಪೇಯ ಬೆಳೆಯಾಗಿ ಇದು ಬೆಳೆಯಲ್ಪಡುತಿತ್ತು. ಘಾನ. ನೈಜೀರಿಯಾ, ಐವರಿಕೋಸ್ಟ್, ಬ್ರೆಜಿಲ್, ಮಲೇಶ್ಯಾ ಮತ್ತು ಕ್ಯಾಮರೂನ್‌ಗಳು ಕೊಕ್ಕೋ ಬೆಳೆಯುವ ಪ್ರಮುಖ ರಾಷ್ಟ್ರಗಳಾಗಿವೆ. ತೇವಾಂಶ ಭರಿತ ಉಷ್ಣ ಪ್ರದೇಶದ ಬೆಳೆಯಾದ ಕೊಕ್ಕೋವನ್ನು ಭಾರತದ ಸೂಕ್ತ ಪ್ರದೇಶಗಳಿಗೆ ಪರಿಚಯಿಸಲಾಗಿದೆ. 1970 ರಿಂದ ಈಚೆಗೆ ತೆಂಗಿನ ಮತ್ತು ಅಡಿಕೆ ತೋಟಗಳಲ್ಲಿ ಮಿಶ್ರಬೆಳೆಯಾಗಿ ಕೊಕ್ಕೊ ಬೆಳಸಲ್ಪಡುತ್ತಾ ಬಂದಿದೆ. ಪಶ್ಚಿಮ ಘಟ್ಟ ಹಾಗೂ ಅದರ ಮೈದಾನು ಪ್ರದೇಶಗಳಲ್ಲಿ ಭಾಗಶಃ ಅರಣ್ಯವನ್ನು ತೆರವುಗೊಳಿಸಿ, ಸಾಕಷ್ಟು ಸೂರ್ಯ ಪ್ರಕಾಶ ದೊರೆಯುವಂತೆ ಮಾಡಿ ಬೆಳೆಯಲ್ಪಡುತ್ತಿದೆ.

ಪ್ರಸಕ್ತ, ಭಾರತದಲ್ಲಿ 17800 ಹೆಕ್ಟೇರ್ ತೋಟದಿಂದ 10,000 ಮೆಟ್ರಿಕ್‌ಟನ್ ಕೊಕ್ಕೊ ಉತ್ಪಾದಿಸಲ್ಪಡುತ್ತಿದೆ. ಒಟ್ಟೂ ಪ್ರದೇಶದ ಶೇಕಡ 71 ರಷ್ಟನ್ನು ಕೇರಳ ರಾಜ್ಯ ಹೊಂದಿದ್ದು ಒಟ್ಟು ಉತ್ಪಾದನೆಯ ಶೇಕಡಾ 80 ರಷ್ಟನ್ನು ಈ ರಾಜ್ಯವು ಉತ್ಪಾದಿಸುತ್ತಿದೆ. ಒಟ್ಟು ಉತ್ಪಾದನಾ ಪ್ರದೇಶದ ಶೇಕಡ 71ರಷ್ಟನ್ನು ಕೇರಳ ರಾಜ್ಯ ಹೊಂದಿದ್ದು ಒಟ್ಟು ಉತ್ಪಾದನೆಯ ಶೇಕಡಾ 80ರಷ್ಟನ್ನು ಈ ರಾಜ್ಯವು ಉತ್ಪಾದಿಸುತ್ತಿದೆ. ಆಂಧ್ರಪ್ರದೇಶವು ಉತ್ಪಾದನಾ ಪ್ರದೇಶದಲ್ಲಿ ಎರಡನೇ ಸ್ಥಾನದಲ್ಲಿದ್ದರೂ ಅಧಿಕ ಉತ್ಪಾದನೆಯಿಂದಾಗಿ ಕರ್ನಾಟಕವು ಎರಡನೇ ಸ್ಥಾನದಲ್ಲಿದೆ. ತೆಂಗು, ಕಂಗು, ತಾಳೆಎಣ್ಣೆ ಬೆಳೆವ ಇತರ ರಾಜ್ಯಗಳಿಗೆ ಇದನ್ನು ಪರಿಚಯಿಸುವ ಅಗತ್ಯ ಇದೆ. ಭಾರತೀಯ ಚಾಕೋಲೇಟ್ ಉದ್ಯಮದ ಬೇಡಿಕೆಯಾದ 30000 ಮೆ.ಟ ಉತ್ಪಾದನೆಯನ್ನು ಪೂರೈಸುವತ್ತ ಕೇರಳದ ಕೊಚ್ಚಿಯಲ್ಲಿರುವ ಭಾರತೀಯ ಗೇರು ಮತ್ತು ಕೊಕ್ಕೊ ಅಭಿವೃದ್ಧಿ ನಿರ್ದೇಶನಾಲಯವು ಉತ್ಪಾದನಾ ಪ್ರದೇಶವನ್ನು ವಿಸ್ತರಿಸಲು ಕೆಲವೊಂದು ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ನರ್ಸರಿ ಮತ್ತು ತೋಟಗಳ ನಿರ್ವಹಣೆಯಿಂದ ಸ್ಥಿರವಾದ ಬೆಳೆಯನ್ನು ಪಡೆಯಲು ಕ್ರಮಾಗತ ಕೃಷಿ ಚಟುವಟಿಕೆಗಳ ಅರಿವನ್ನು ಹೊಂದಬೇಕಾಗಿದೆ. ಇದನ್ನು ಗಮನದಲ್ಲಿಟ್ಟು ಕೊಂಡು ವೈಜ್ಞಾನಿಕ ಕೃಷಿ ಪದ್ಧತಿಯ ಪರಿಕಲ್ಪನೆಯಲ್ಲಿ ಈ ಕೃಷಿ ಕಾಲನಿರ್ಣಯವನ್ನು ಬರೆಯಲಾಗಿದೆ. ಹೊಸದಾಗಿ ಕೊಕ್ಕೊ ಬೆಳೆಯುವವರಿಗೆ ಪ್ರಗತಿಪರ ಕೃಷಿಕರಿಗೆ ನರ್ಸರಿ ನಡೆಸುವವರಿಗೆ ವಿಸ್ತರಣಾ ಅಧಿಕಾರಿಗಳಿಗೆ ಇದು ಸಹಾಯಕವಾಗುವಂತೆ ಇದನ್ನು ರಚಿಸಲಾಗಿದೆ.

## ಕೊಕ್ಕೋ ಕೃಷಿಗೆ ಯೋಗ್ಯವಾದ ಹವಾಗುಣ

ಒಂದು ಹೊಸ ಬೆಳೆಯನ್ನು ಹೊಸ ಪ್ರದೇಶಕ್ಕೆ ಪರಿಚಯಿಸುವಾಗ ಅಲ್ಲಿಯ ಹವಾಗುಣ ಮತ್ತು ಮಣ್ಣಿನ ಲಕ್ಷಣ ಆ ಬೆಳೆಗೆ ಯೋಗ್ಯವೇ ಎಂದು ತಿಳಿಯುವುದು ಮುಖ್ಯವಾಗಿರುತ್ತದೆ. ಕೊಕ್ಕೋ ಒಂದು ಬಹುವಾರ್ಷಿಕ ಬೆಳೆ. ಆದುದರಿಂದ ಬೇರೆ ಬೇರೆ ಋತುಗಳಲ್ಲಿ ಉಂಟಾಗುವ ಹವಾಗುಣದ ಏರಿಳಿತಗಳನ್ನು ತಡೆದು ಸಮೃದ್ಧ ಫಲ ನೀಡುತ್ತಾ ಬಾಳುವಂತಿರಬೇಕು. ಕೊಕ್ಕೋ ಬೆಳೆಯು $20^0$ ಉತ್ತರ ಮತ್ತು $20^0$ ದಕ್ಷಿಣ ಅಕ್ಷಾಂಶಗಳ ಮಧ್ಯೆ ಬೆಳೆಯಬಲ್ಲುದಾದರೂ ಅಧಿಕ ಬೆಳೆಯಲ್ಪಡುವ ಪ್ರದೇಶವು $10^0$ ಉತ್ತರ ಮತ್ತು $10^0$ ದಕ್ಷಿಣ ಅಕ್ಷಾಂಶ ಪ್ರದೇಶದಲ್ಲಿದೆ. ಸಮುದ್ರ ಮಟ್ಟದಿಂದ 500 ಮೀಟರ್ ಎತ್ತರದ ಪ್ರದೇಶದಲ್ಲಿ ಇದು ಬೆಳೆಯಬಲ್ಲುದು. ಆದರೂ ಇದು ಸಮುದ್ರ ಮಟ್ಟದಿಂದ 300 ಮೀಟರ್ ಎತ್ತರದ ಪ್ರದೇಶದಲ್ಲಿ ಹುಲುಸಾಗಿ ಬೆಳೆಯುವುದು. ತಿಂಗಳಿಗೆ ಸರಾಸರಿ 90-100 ಮಿಲಿ ಮೀಟರ್ ಮಳೆಯಂತೆ ವರ್ಷದಲ್ಲಿ 1500-2000 ಮಿಲಿ ಮೀಟರ್ ಮಳೆ ಬೀಳುವ ಪ್ರದೇಶಗಳು ಯೋಗ್ಯವಾಗಿದೆ. $15^0$ ಸೆಲ್ಸಿಯಸ್ - $39^0$ ಸೆಲ್ಸಿಯಸ್ ಉಷ್ಣತೆಯ ಏರಿಳಿತವಿರುವ ಹವಾಮಾನವನ್ನು ಇದು ತಾಳಿಕೊಳ್ಳಬಲ್ಲುದಾದರೂ ವಾರ್ಷಿಕ ಸರಾಸರಿ $25^0$ ಸೆ ತಾಪಮಾನವು ತಕ್ಕುದಾಗಿದೆ. ಈ ಬೆಳೆಯು ಕನಿಷ್ಠ ಉಷ್ಣಾಂಶ 10 ಸೆಲ್ಸಿಯಸ್‌ಗಿಂದ ಕೆಳಗೆ ಬರುವ ಪ್ರದೇಶಗಳಲ್ಲಿ ಮತ್ತು ಸರಾಸರಿ 21 ಸೆಲ್ಸಿಯಸ್‌ಗಿಂತ ಕೆಳಗಿನ ಉಷ್ಣಾಂಶ ಬರುವ ಪ್ರದೇಶಗಳು ಇದಕ್ಕೆ ಯೋಗ್ಯವಲ್ಲ. ಕೊಕ್ಕೋಕ್ಕ ಬೆಳೆಯು ವರ್ಷಪೂರ್ತಿ ಹೆಚ್ಚಿನ ಆರ್ದ್ರತೆ ಹೊಂದಿದ ಹವಾಮಾನ ಬಯಸುತ್ತದೆ. ಹೊಸದಾಗಿ ತೋಟಗಳನ್ನು ಮಾಡುವವರು ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು ಅವಶ್ಯಕ.

## ಮಣ್ಣು

ಕೊಕ್ಕೊ ಬೆಳೆಗೆ ಉತ್ತಮ ಬಸಿಯುವ ಗುಣವುಳ್ಳ ಆಳವಾದ ಹರವುಳ್ಳ ಮಣ್ಣು ಯೋಗ್ಯವಾಗಿದೆ. ನೀರು ಬಸಿದು ಹೋಗದ ಮಣ್ಣು ಈ ಬೆಳೆಗೆ ತಕ್ಕುದಲ್ಲ. ಕೆಂಪು ಸೂಸಲು ಮಣ್ಣು ಮತ್ತು ಮರಳು ಮಿಶ್ರಿತ ಮೆಕ್ಕಲು ಮಣ್ಣಿನಲ್ಲಿ ಹೆಚ್ಚಾಗಿ ಬೆಳೆಯಲ್ಪಡುತ್ತದೆ. ಈ ಬೆಳೆಯು 4.5 - 8.0 ರಸಸಾರ (ಪಿಹೆಚ್) ತಡೆದುಕೊಳ್ಳಬಲ್ಲುದಾದರೂ 6.5 - 7.0 (ಪಿಹೆಚ್) ರಸಸಾರವಿರುವ ಸಾಯಯುವ ಭರಿತ ಮಣ್ಣು ಯೋಗ್ಯವಾಗಿದೆ. ನರ್ಸರಿ ಮತ್ತು ತೋಟಗಳಿಗೆ ಬೇಸಿಗೆ ಕಾಲದಲ್ಲಿ ನೀರುಣಿಸಲು ಪಕ್ಕದಲ್ಲೇ ನೀರಿನ ಆಶ್ರಯ ಅಗತ್ಯ, ಏಕೆಂದರೆ ಕೊಕ್ಕೊವು ನೀರಿನ ಕೊರತೆಗೆ ಬಹಳ ಬೇಗನೆ ಸೊರಗುತ್ತದೆ.

# ಕೊಕ್ಕೊ ವ್ಯವಸಾಯದ ಕಾಲನಿರ್ಣಯ

## ಜನವರಿ

| | |
|---|---|
| ನರ್ಸರಿಯಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ನೀರುಣಿಸುವಿಕೆ - ಪ್ರತಿನಿತ್ಯ (ಹೋಸ್ ಅಥವಾ ಸ್ಪ್ರಿಂಕ್ಲರ್ ಮಾದರಿಯಲ್ಲಿ) |
| | ಕಳೆಕೀಳುವಿಕೆ |
| | ದುರ್ಬಲ ಮತ್ತು ಕಸಿಗೊಳ್ಳದ ಗಿಡಗಳನ್ನು ನಿರ್ಮೂಲಗೊಳಿಸುವುದು |
| | ವರ್ಷಪೂರ್ತಿ ನೀರಾವರಿ ಸೌಲಭ್ಯವಿರುವ ನರ್ಸರಿಗಳಲ್ಲಿ ಮೊಳಕೆಯೊಡೆಯದೆ ಖಾಲಿ ಇರುವ ತೊಟ್ಟೆಗಳಿಗೆ ಬೀಜ ಮರುನಾಟಿ ನಡೆಸುವುದು. |
| | ಬಿತ್ತಿದ ತೊಟ್ಟೆಗಳನ್ನು ಮತ್ತು ಗಿಡ ಇರುವ ತೊಟ್ಟೆಗಳನ್ನು ಮರು ಜೋಡಿಸುವುದು. |
| | ನೆರಳು ಒದಗಿಸುವುದು<br>ಶೇಡ್‌ನೆಟ್/ನೆರಳು ಪರದೆ ಅಥವಾ ತೆಂಗಿನ ಗರಿಗಳನ್ನು ಹೊದಿಸಿದ ನೆರಳೊದಗಿಸುವುದು. |
| ತೋಟಗಳಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಹೊಸತೋಟಗಳಲ್ಲಿ:<br>ಕಸಿಗಿಡ ನೆಟ್ಟದ್ದಾಗಿದ್ದಾರೆ: ಕಸಿಭಾಗದಿಂದ ಕೆಳಗೆ (ಮೂಲದಿಂದ) ಬರುವ ಚಿಗುರುಗಳನ್ನು ತೆಗೆಯುವುದು.<br>ಬೀಜದಿಂದ ಉತ್ಪಾದಿಸುವ ಗಿಡವಾಗಿದ್ದರೆ ತಳಭಾಗದಿಂದ ಬರುವ ಚಿಗುರುಗಳನ್ನು ತೆಗೆಯುವುದು. |
| | ನೀರಾವರಿ : ಹನಿ ನೀರಾವರಿ ವಿಧಾನ ಗಿಡವೊಂದಕ್ಕೆ 20ಲೀ ನೀರು ಪ್ರತಿನಿತ್ಯ ಉಣಿಸಬೇಕು. |
| | ನೀರು ಹಾಯಿಸುವ ವಿಧಾನದಲ್ಲಿ 5 ದಿನಕ್ಕೊಂದಾವರ್ತಿ ಗಿಡವೊಂದಕ್ಕೆ 175 ಲೀ ನಷ್ಟ ಒದಗಿಸಬೇಕು. |
| | ಬಿಸಿಲು ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವುದು.<br>ಕೊಯ್ಲು : ಹೊಸ ಹೂ ಗಳಿಗೆ ಮತ್ತು ಹೂ ಬಿಡುವ ಜಾಗಕ್ಕೆ ಪೆಟ್ಟಾಗದ ಹರಿತವಾದ ಕತ್ತಿಯಿಂದ ಮಾಗಿ ಹಳದಿ ಬಣ್ಣಕ್ಕೆ ತಿರುಗಿದ ಕಾಯಿಗಳನ್ನು ಕೊಯ್ಯಬೇಕು.<br>ಮಳೆರಹಿತ ಕಾಲಗಳಲ್ಲಿ ಈ ಪ್ರಯೋಗದಿಂದ ಹೆಚ್ಚಿನ ಯಶಸ್ಸನ್ನು ಪಡೆಯಬಹುದು<br>ಅಳಿಲು ಮತ್ತು ಇಲಿಗಳ ಉಪಟಳ ನಿಯಂತ್ರಿಸಬೇಕು. |

## ಫೆಬ್ರುವರಿ

| | |
|---|---|
| ನರ್ಸರಿಯಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಪ್ರತಿನಿತ್ಯ ನೀರುಣಿಸುವಿಕೆ |
| | ವಾರಕ್ಕೊಮ್ಮೆ ಕಳೆಕೀಳುವುದು |
| | ತೊಟ್ಟೆಗಳ ವ್ಯವಸ್ಥಿತ ಮರುಜೋಡಣೆ |
| | ನೆರಳಿನ ವ್ಯವಸ್ಥೆಯನ್ನು ಕಾಯ್ದುಕೊಳ್ಳುವುದು |
| ತೋಟಗಳಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ನೀರಾವರಿ : ಹನಿ ನೀರಾವರಿಯಲ್ಲಿ ಪ್ರತಿನಿತ್ಯ ನೀರು ಹಾಯಿಸಬೇಕು.<br>: ಹಾಯಿಸುವ ವಿಧಾನದಲ್ಲಿ 5 ದಿನಗಳಿಗೊಮ್ಮೆ ನೀರು ಹಾಯಿಸಬೇಕು.<br>ಕಸಿಭಾಗಕ್ಕಿಂತ ಕೆಳಕ್ಕೆ ಮತ್ತು ಗಿಡಗಳ ತಳಭಾಗದಲ್ಲಿರುವ ಚಿಗುರುಗಳನ್ನು ಕತ್ತರಿಸುವುದು.<br>ರೋಗಪೀಡಿತ, ಒಣಗಿದ, ಕಪ್ಪಾದ, ಕಾಯಿಯ ಮಿಡಿಗಳನ್ನು ತೆಗೆಯುವುದು.<br>ಈ ಸಂದರ್ಭಗಳಲ್ಲಿ ಗಿಡದ ಹೂ ಬಿಡುವ ಭಾಗಗಳಿಗೆ ಗಾಯವಾಗದಂತೆ ಎಚ್ಚರ ವಹಿಸುವುದು. |
| | ನೆರಳಿಗಾಗಿ ಹೊದಿಸಿದ ಹೆಣೆದ ಮಡಲು ಅಥವಾ ಇತರ ವಸ್ತುಗಳ ಜೀರ್ಣಗೊಂಡಿದ್ದರೆ ಅದನ್ನು ಬದಲಾಯಿಸುವುದು. |

| | |
|---|---|
| ನರ್ಸರಿಯಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಪ್ರತಿನಿತ್ಯ ನೀರುಣಿಸುವಿಕೆ |
| | ನೆರಳಿನ ವ್ಯವಸ್ಥೆಯ ನಿರ್ವಹಣೆ ಹಾಗೂ ಕಾಯ್ದುಕೊಳ್ಳುವುದು |
| ತೋಟಗಳಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಬೇಸಿಗೆ ಕಾಲದಲ್ಲಿ ಗಿಡದ ಬುಡಭಾಗದಲ್ಲಿ ಮಣ್ಣಿನ ತೇವಾಂಶ ಹಾಗೂ ಸಡಿಲತೆಯನ್ನು ಕಾಯ್ದುಕೊಳ್ಳಲು ಗಿಡವೊಂದಕ್ಕೆ 5 ಕೆ.ಜಿ. ಹಟ್ಟಿ ಗೊಬ್ಬರ, ತೆಂಗಿನ ನಾರಿನ ಕಾಂಪೋಸ್ಟ್ ಮತ್ತು ಹಸಿರೆಲೆಗಳನ್ನು ಒದಗಿಸುವುದು. |
| | ನೀರಾವರಿ ಯಥಾ ಪ್ರಕಾರ ಮುಂದುವರಿಸುವುದು |
| | ಗಿಡಗಳ ಮೇಲೆ ಬೀಳುವ ಬಿಸಿಲ ಪ್ರಖರತೆಯನ್ನು ನಿಯಂತ್ರಿಸಲು ಬಾಳೆ ಯಾ ಇತರ ನೆರಳಿನ ಗಿಡಗಳನ್ನು ಬೆಳೆಸುವುದು. |
| | ಸವರುವಿಕೆ - ಮೂಲಕಾಂಡದಿಂದ ಬರುವ ಚಿಗುರು ನಿಯಂತ್ರಿಸುವುದು |
| | ಕೀಟ ಮತ್ತು ರೋಗಗಳಿಂದ ಸಸ್ಯ ಸಂರಕ್ಷಣೆ. |

### ಕಜ್ಜಿ ರೋಗ (*P. Palmivora*) (Canker)

ಈ ರೋಗವು ಮುಖ್ಯಕಾಂಡ, ಕವಲು ಒಡೆಯುವ ಜಾಗ ಅಥವಾ ಕವಲುಗಳ ಮೇಲೆ ಕಂಡುಬುರುತ್ತದೆ. ಪ್ರಾರಂಭದಲ್ಲಿ ಇದು ತೊಗಟೆಯ ಹೊರಭಾಗದಲ್ಲಿ ಬೂದು ಮಿಶ್ರಿತ ಕಂದು ಬಣ್ಣದ ವಿಶಿಷ್ಟ ಚಿಹ್ನೆಯಾಗಿ ಕಂಡುಬರುತ್ತದೆ. ನಂತರ ಈ ಭಾಗದಿಂದ ಕೆಂಪು ಮಿಶ್ರಿತ ಕಂದು ಬಣ್ಣದ ರಸ ಒಸರಿ ಅಲ್ಲಿಯೇ ತುಕ್ಕು ಹಿಡಿದಂತೆ ಕಂಡುಬರುತ್ತದೆ. ಒಳಭಾಗದ ಅಂಗಾಂಶಗಳು ಕೊಳೆತು ಕೆಂಪು ಮಿಶ್ರಿತ ಕಂದು ಬಣ್ಣಕ್ಕೆ ತಿರುಗುತ್ತದೆ. ಈ ಕಜ್ಜಿಗಳು ಮುಖ್ಯ ಕಾಂಡ ಅಥವಾ ರೆಂಬೆಗಳ ಸುತ್ತಲೂ ಉಂಗುರದಂತೆ ಒಂದಕ್ಕೊಂದು ಸೇರಿಕೊಂಡಾಗ ಆಭಾಗದಿಂದ ಮೇಲೆ ಗಿಡವು ಒಣಗಿ ಸಾಯುತ್ತದೆ. ಪೈಟೊಪ್ಥೋರಾ ಶಿಲೀಂದ್ರದ ಸೋಂಕು ಇರುವ ಕಾಯಿಗಳಿಂದ ಸಹ ಈ ರೋಗ ಗಿಡಗಳಿಗೆ ಹರಡಬಹುದು. ಆದ್ದರಿಂದ ಇಂತಹ ಕಾಯಿಗಳನ್ನು ತೆಗೆದು ನಾಶಮಾಡಬೇಕು. ರೋಗದ ಪ್ರಾರಂಭದಲ್ಲಿ ರೋಗಗ್ರಸ್ತ ಭಾಗವನ್ನು ಕೆತ್ತಿ ತೆಗೆದು ಬೋರ್ಡೋ ಮುಲಾಮನ್ನು ಹಚ್ಚಿ ಈ ರೋಗವನ್ನು ನಿಯಂತ್ರಿಸಬಹುದು.

ರೋಗದ ತೀವ್ರತೆ ಆಧಿಕವಾಗಿದ್ದಲ್ಲಿ ರೋಗತಗಲಿದ ಭಾಗದಿಂದ ಸ್ವಲ್ಪ ಕೆಳಗೆ ಗಿಡವನ್ನು ಕಡಿದು ಉಪರೆಂಬೆಗಳು ಬರುವಂತೆ ಮಾಡಬೇಕು. ತೋಟದಲ್ಲಿ ನೀರು ನಿಲ್ಲದಂತೆ ಉತ್ತಮ ಬಸಿಗಾಲುವೆಯ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು.

### ಕಾಯಿ ಸೊರಗು-ಕೊಳೆರೋಗ (Charcoal pod rot)

ಕೊಕ್ಕೊ ಕಾಯಿಗಳು ಕಪ್ಪಾಗಿ ಸೊರಗಿಕೊಳ್ಳುವ ಈ ರೋಗವು ವರ್ಷದ ಉದ್ದಕ್ಕೂ ತೋಟದಲ್ಲಿ ಸರ್ವಸಾಮಾನ್ಯವಾಗಿ ಕಂಡುಬರುತ್ತದೆ. ಕಡು ಕಂದು ಬಣ್ಣದ ಮಚ್ಚೆಯಂತೆ ಕಂಡು ಬಂದು ಬಳಿಕ ಕಪ್ಪಾಗುವ ಈ ಕ್ರಿಯೆ ಕಾಯಿಗಳನ್ನು ಸೊರಗಿಸುತ್ತದೆ. ಆಂತರಿಕ ರಚನೆಗಳು ಹಾಳುಗೆಡಹಲ್ಪಟ್ಟು ಬೀಜಗಳೂ ಕಪ್ಪಾಗುತ್ತವೆ. ಇವು ಬೇಸಿಗೆಯಲ್ಲಿ ಹೆಚ್ಚಾಗಿರುತ್ತವೆ. ಈ ರೋಗಕ್ಕೆ ಎಲ್ಲಾ ಪ್ರಾಯದ ಕಾಯಿಗಳೂ ಬಲಿಯಾಗುತ್ತವೆ. ಶೇಕಡಾ ಒಂದರ ಬೋರ್ಡೋ ದ್ರಾವಣದ ಸಿಂಪಡಿಕೆ ರೋಗನಿಯಂತ್ರಣದ ವಿಧಾನವಾಗಿದೆ.

### 1% ಬೋರ್ಡೋ ದ್ರಾವಣ ತಯಾರಿ

ಒಂದು ಕೆ.ಜಿ. ಮೈಲುತುತ್ತನ್ನು 50 ಲೀಟರ್ ನೀರಿನಲ್ಲಿ ಕರಗಿಸಿಕೊಳ್ಳಿ. ಇನ್ನೊಂದು ಪಾತ್ರೆಯಲ್ಲಿ 50 ಲೀಟರ್ ನೀರಿನಲ್ಲಿ 1 ಕೆ.ಜಿ. ಸುಣ್ಣವನ್ನು ಕರಗಿಸಿಕೊಳ್ಳಿ. ಆ ಮೇಲೆ ಮೈಲುತುತ್ತು ದ್ರಾವಣಕ್ಕೆ ನಿಧಾನವಾಗಿ ಸುಣ್ಣದ ದ್ರಾವಣ ಸೇರಿಸುತ್ತಾ ಮಿಶ್ರಣ ಮಾಡಿ. ಹೊಳಪುಳ್ಳ ಚಾಕುವನ್ನು ಈ ಮಿಶ್ರಣದಲ್ಲಿ ಮುಳುಗಿಸಿ ತೆಗೆದಾಗ ಕಂದುಬಣ್ಣ ಅಂಟಿಕೊಂಡಿದ್ದರೆ ದ್ರಾವಣದಲ್ಲಿ ಮೈಲುತುತ್ತು ಅಂಶ ಹೆಚ್ಚಾಗಿ ದ್ರಾವಣ ತಟಸ್ಥ ರಸಸಾರ ಹೊಂದಿಲ್ಲ ಎಂದು ತಿಳಿಯಿರಿ. ಚಾಕುವಿನಲ್ಲಿ ಕಂದುಬಣ್ಣ ಕಾಣದಿರುವ ವರೆಗೆ ಸುಣ್ಣದ ದ್ರಾವಣವನ್ನು ಸೇರಿಸುತ್ತಿರಬೇಕು. ಮಿಶ್ರಣಮಾಡಲು ಮರದ ಮಣ್ಣಿನ ಅಥವಾ ತಾಮ್ರದ ಪಾತ್ರೆಯನ್ನು ಉಪಯೋಗಿಸಿ.



ಕಜ್ಜಿ ರೋಗ



ಕಾಯಿ ಸೊರಗು-ಕೊಳೆರೋಗ

### 10% ಬೋರ್ಡೋ ಮುಲಾಮು ತಯಾರಿಸುವುದು

100 ಗ್ರಾಂ ಮೈಲು ತುತ್ತು ಮತ್ತು 100ಗ್ರಾಂ ಸುಣ್ಣವನ್ನು ಪ್ರತ್ಯೇಕವಾಗಿ ಅರ್ಧರ್ಧ ಲೀಟರ್ ನೀರಿನಲ್ಲಿ ಚೆನ್ನಾಗಿ ಕದಡಿಸಿ ಕರಗಿಸಿ ಕೊಂಡು ಬಳಿಕ ಮಿಶ್ರಣಗೊಳಿಸಿದಾಗ ಬೋರ್ಡೋ ಮುಲಾಮು ತಯಾರಾಗುತ್ತದೆ.

### ಹಿಟ್ಟು ತಿಗಣೆ (Mealy bugs)

ಇದೊಂದು ಕೊಕ್ಕೋದಲ್ಲಿ ಪ್ರಮುಖ ಕೀಟ. ಎಳೆಯ ಮತ್ತು ಪ್ರಬುದ್ಧ ಹೆಣ್ಣು ಕೀಟಗಳು ಎಳೆಯ ಕಾಂಡ, ಹೂ, ಎಳೆಯ ಮತ್ತು ಬಲಿತ ಕಾಯಿಗಳಿಂದ ರಸ ಹೀರುತ್ತವೆ. ಈ ಕೀಟದ ಬಾಧೆಗೊಳಗಾದ ಸಣ್ಣ ಸಸಿಗಳ ಬೆಳವಣಿಗೆ ಕುಂಠಿತಗೊಳ್ಳುತ್ತದೆ ಮತ್ತು ಬೇಡದ ಎತ್ತರದಲ್ಲಿ ಹೆಚ್ಚು ಕವಲುಗಳನ್ನು ಹೊಂದಿರುತ್ತವೆ. ಎಳೆಯ ಕಾಯಿಗಳು ಸೊರಗಿ ಹೋಗುತ್ತವೆ. ಬೇಸಿಗೆಯಲ್ಲಿ ಈ ಕೀಟದ ಉಪಟಳ ಹೆಚ್ಚಾಗಿ ಕಂಡು ಬರುತ್ತದೆ.

ಕೀಟಗಳು ಹೆಚ್ಚಾಗಿ ಕಂಡು ಬಂದ ಕಡೆ 50 ಮಿ. ಲೀ. ಪೆಂಥಿಯಾನ್ (ಲೆಬೇಸಿಡ್) ಅಥವಾ 160ಮಿ.ಲೀ ಡೈಮಿಥೋಯೇಟ (ರೋಗರ್)ನ್ನು 100 ಲೀ. ನೀರಿನಲ್ಲಿ ಕದಡಿಸಿ ಸಿಂಪಡಿಸಬೇಕು. 30 ದಿನಗಳ ಬಳಿಕ ಕೀಟದ ಬಾಧೆ ಕಂಡು ಬಂದಲ್ಲಿ ಇನ್ನೊಮ್ಮೆ ಔಷಧ ಸಿಂಪಡಿಸಬೇಕು.

### ಟೀ ಸೊಳ್ಳೆ (Tea mosquito bugs)

ಈ ಕೀಟವು ಸಾಮಾನ್ಯವಾಗಿ ಕಾಯಿಗಳನ್ನು ಹಾಳು ಮಾಡುತ್ತದೆ. ಈ ಕೀಟವು ರಸ ಹೀರಿದ ಸ್ಥಳದಲ್ಲಿ ಕಂದು ಬಣ್ಣದ ವೃತ್ತಾಕಾರದ ಚುಕ್ಕಿಗಳು ಕಂಡು ಬರುತ್ತವೆ. ದಿನ ಕಳೆದಂತೆ ಈ ಚುಕ್ಕಿಗಳು ಕಪ್ಪು ಬಣ್ಣಕ್ಕೆ ತಿರುಗುತ್ತವೆ. ಕಾಯಿಯ ಮೇಲೆ ಬಹಳಷ್ಟು ಕಡೆಗಳಲ್ಲಿ ರಸಹೀರುವುದರಿಂದ ಕಾಯಿಯು ತನ್ನ ಆಕಾರವನ್ನು ಕಳೆದುಕೊಳ್ಳುತ್ತದೆ.

ಈ ಕೀಟ ನಿಯಂತ್ರಣಕ್ಕೆ 160 ಮಿ.ಲೀ ಡೈಮಿಥೋಯೇಟ (ರೋಗರ್) ಕೀಟ ನಾಶಕವನ್ನು 100 ಲೀಟರ್ ನೀರಿನಲ್ಲಿ ಮಿಶ್ರ ಮಾಡಿ ಸಿಂಪಡಿಸಬೇಕು.



ಹಿಟ್ಟು ತಿಗಣೆ



ಟೀ ಸೊಳ್ಳೆ

**ಎಪ್ರಿಲ್**

| | |
|---|---|
| ನರ್ಸರಿ | ಪ್ರತಿನಿತ್ಯ ನೀರುಣಿಸುವಿಕೆ |
| ತೋಟಗಳಲ್ಲಿ / ಕಳೆ ಕೀಳುವಿಕೆ: | ಹೊಸದಾಗಿ ನೆಟ್ಟ ತೋಟಗಳಲ್ಲಿ ಕಳೆ ನಿಯಂತ್ರಣ ಮಾಡುವುದು. |
| | ಬುಡ ಬಿಡಿಸುವುದು ಮತ್ತು ಅಗತೆ ಮಾಡುವುದು, |
| | ಗೊಬ್ಬರ ಹಾಕುವುದು : ನೀರಾವರಿ ತೋಟಗಳಲ್ಲಿ ಕೊನೆಯ ವಾರದಲ್ಲಿ ಕೊಡುವುದು. |
| | ನೀರಾವರಿ : ಸಾಕಷ್ಟು ನೀರುಣಿಸಿ ಗೊಬ್ಬರವನ್ನು ಹೀರಿಕೊಳ್ಳಲು ಅನುಕೂಲವಾಗುವಂತೆ ಮಾಡುವುದು. |

### ಕೊಕ್ಕೋ ಗಿಡಗಳಿಗೆ ಗೊಬ್ಬರದ ಪ್ರಮಾಣ

ಕೊಕ್ಕೋ ಗಿಡವೊಂದಕ್ಕೆ ವರ್ಷಕ್ಕೆ 100 ಗ್ರಾಂ ಸಾರಜನಕ 40 ಗ್ರಾಂ ರಂಜಕ 140 ಗ್ರಾಂ ಪೊಟೇಶನ್ನು ಎರಡು ಸಮ ಭಾಗಗಳಲ್ಲಿ ಕೊಡಬೇಕು. ಪ್ರಥಮ ಭಾಗವನ್ನು ಎಪ್ರಿಲ್- ಮೇ ಮತ್ತು ಸೆಪ್ಟೆಂಬರ್ - ಅಕ್ಟೋಬರ್‌ನಲ್ಲಿ ಎರಡನೇ ಭಾಗವನ್ನು ಕೊಡುವುದು. ಅಂದರೆ ಮುಂಗಾರು ಮಳೆಯ ಕಾಲದಲ್ಲಿ ಮತ್ತು ಹಿಂಗಾರು ಮಳೆಯ ಕಾಲದಲ್ಲಿ ಗೊಬ್ಬರ ಕೊಡುವುದು.

### ಗೊಬ್ಬರ ಕೊಡುವ ವಿಧಾನ

ಮೊದಲ ವರ್ಷದಲ್ಲಿ ಗಿಡದ ಸುತ್ತ 30 ಸೆಂ. ಮೀ. ತ್ರಿಜ್ಯದಲ್ಲಿ ಗೊಬ್ಬರಗಳನ್ನು ಹಾಕಿ ಚೆನ್ನಾಗಿ ಮಣ್ಣಿನಲ್ಲಿ ಮಿಶ್ರಗೊಳಿಸಬೇಕು. ಬೆಳೆದ ಗಿಡಗಳಿಗೆ ಗೊಬ್ಬರ ನೀಡುವ ಉತ್ತಮ ವಿಧಾನವೆಂದರೆ ಗಿಡದ ಸುತ್ತ 75 ಸೆಂ. ಮೀ ತ್ರಿಜ್ಯದಲ್ಲಿ ಮಣ್ಣನ್ನು ಕೆದಕಿ ಗೊಬ್ಬರವನ್ನು ಕೊಡುವುದು. ಗಿಡ ಬೆಳೆದಂತೆ ಗೊಬ್ಬರ ಉಣಿಸುವ ಪ್ರದೇಶವನ್ನು 150 ಸೆಂ. ಮೀ. ತ್ರಿಜ್ಯಕ್ಕೆ ವಿಸ್ತರಿಸಬಹುದು.

**ಶಿಫಾರಸು ಮಾಡಲಾದ ರಾಸಾಯನಿಕ ಗೊಬ್ಬರಗಳು (ಪ್ರತಿ ಮರಕ್ಕೆ)**

| ಗೊಬ್ಬರಗಳು | ಮೊದಲ ವರ್ಷ | ಎರಡನೇ ವರ್ಷ | ಮೂರನೇ ವರ್ಷ ಮತ್ತು ಅನಂತರ |
|---|---|---|---|
| ಸಾರಜನಕ | 33 | 66 | 100 |
| ರಂಜಕ | 13 | 26 | 40 |
| ಪೊಟೇಶ್ | 46 | 92 | 140 |
| ಯೂರಿಯ | 72 | 144 | 220 |
| ಶಿಲಾ ರಂಜಕ (ರಾಕ್ ಫೊಸ್ಫೇಟ್) | 65 | 130 | 200 |
| ಮ್ಯೂರಿಯೆಟ್ ಪೊಟೇಶ್ | 77 | 154 | 230 |

## ಮೇ

| | |
|---|---|
| ನರ್ಸರಿಯಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ನರ್ಸರಿ ನಿರ್ಮಾಣ: ಕೊಕ್ಕೋದ ಮುಖ್ಯ ಕ್ಕೊಲು ಈ ತಿಂಗಳಲ್ಲಿ ಇರುವುದರಿಂದ ಬಿತ್ತಲು ಬೇಕಾದ ಬೀಜಗಳು ಸಾಕಷ್ಟು ದೊರೆಯುವುದು. |
| | ನೀರಾವರಿ : ಪ್ರತಿನಿತ್ಯ ನೀರುಣಿಸುವುದು |
| ತೋಟಗಳಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ತೋಟ ಮಾಡಲು ಸ್ಥಳಗಳ ಆಯ್ಕೆ ಮತ್ತು ಗಿಡಗಳನ್ನು ನೆಡಲು ಗುರುತು ಮಾಡುವುದು |
| | 50ಸೆಂ. ಮೀ ಘನ ಅಳತೆಯ ಗುಂಡಿಗಳನ್ನು ನಿರ್ಮಿಸುವುದು. ಗುಂಡಿಗಳ ಅರ್ಧಭಾಗವನ್ನು 15-20 ಕೆ.ಜಿ.ಯಷ್ಟು ಹಟ್ಟಿಗೊಬ್ಬರ ಮತ್ತು ಮೇಲ್ಮಣ್ಣಿನಿಂದ ತುಂಬಿಸುವುದು. ಕೊಯ್ಲು: ಮೇ ತಿಂಗಳ ಕೊನೆಯಲ್ಲಿ ಕೊಯ್ಲಿನ ಮುಖ್ಯ ಸಮಯವಾಗಿದೆ. ಕೊಯ್ಲು ಮಾಡುವಾಗ ಗಿಡಗಳಿಗೆ ಗಾಯವಾಗದಂತೆ ಎಚ್ಚರ ವಹಿಸುವುದು. |
| | ಗೊಬ್ಬರ ಕೊಡುವುದು: ಪ್ರಥಮ ಕಂತಿನ ಗೊಬ್ಬರವನ್ನು ಎಪ್ರಿಲ್ ತಿಂಗಳಲ್ಲಿ ಕೊಡದೆ ಇದ್ದಲ್ಲಿ ನೀರಾವರಿ ಆಶ್ರಿತ ತೋಟಗಳಲ್ಲಿ ಮತ್ತೆ ಕೊಡಬಹುದು. |
| | ಸಸ್ಯ ಸಂರಕ್ಷಣೆ: ಮುಂಗಾರು ಮಳೆಯ ಮೊದಲು ರೋಗ ಬಾಧಿತ ಕಾಯಿ ಮತ್ತು ಒಣಗಿದ ರೆಂಬೆಗಳನ್ನು ತೆಗೆದು ಹಾಕುವುದು. |
| | ಮುಂಜಾಗರೂಕತ ಕ್ರಮವಾಗಿ ಬೋರ್ಡೋ ದ್ರಾವಣವನ್ನು ಸಿಂಪಡಿಸುವುದರಿಂದ ಮಳೆಗಾಲದಲ್ಲಿ ಬರುವ ಶಿಲೀಂಧ್ರ ರೋಗ ಬಾಧೆಯಿಂದ ರಕ್ಷಿಸಿಕೊಳ್ಳಬಹುದು. |

## ನರ್ಸರಿ ಅಭಿವೃದ್ಧಿ/ನಿರ್ಮಾಣ/ಸ್ಥಾಪನೆ

### ತಾಯಿ ಮರ ಮತ್ತು ಕಾಯಿಗಳ ಆಯ್ಕೆ ವಿಧಾನ

ಉತ್ತಮ ಮಟ್ಟದ ಗಿಡಗಳ ಉತ್ಪಾದನೆಗಾಗಿ ತಾಯಿ ಮರ ಮತ್ತು ಕಾಯಿಗಳನ್ನು ಆಯ್ಕೆ ಮಾಡುವಾಗ ಈ ಕೆಳಗಿನ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

- ವರ್ಷಕ್ಕೆ 70-100 ದೊಡ್ಡ ದೊಡ್ಡ ಕಾಯಿಗಳನ್ನು ನೀಡುವ ಮರಗಳನ್ನು ಆಯ್ಕೆ ಮಾಡುವುದು. ಅಧಿಕ ಇಳುವರಿ ಮತ್ತು ಉತ್ತಮ ಗುಣ ಮಟ್ಟದ ಬೀಜಗಳಿಂದ ಪಡೆದ ಗಿಡಗಳು ಅಧಿಕ ಇಳುವರಿ ಕೊಡಬಲ್ಲುದು.
- ಫಾರೆಸ್ಟಿರೊ ವಿಧದ ಮರಗಳಿಂದ (ಕಾಯಿ ಹಸಿರಾಗಿರುತ್ತದೆ, ಹಣ್ಣಾದಾಗ ಹಳದಿ ಬಣ್ಣಕ್ಕೆ ತಿರುಗುತ್ತದೆ) ಸಾಧಾರಣ ಗಾತ್ರದ, 350ಗ್ರಾಂ ತೂಕಕ್ಕಿಂತ ಹೆಚ್ಚಿನ ತೂಕ ಹೊಂದಿದ, ನಯವಾದ ಅಥವಾ ಕಡಿಮೆ ಒರಟಾದ, ತೊಟ್ಟಿನ ಭಾಗದಲ್ಲಿ ಮುರುಟಿದಂತಿರದ ಕಾಯಿಗಳನ್ನು ಆಯ್ಕೆ ಮಾಡುವುದು.
- ಒಂದು ಸೆಂಟಿ ಮೀಟರ್‌ಗಿಂತ ಅಧಿಕ ದಪ್ಪದ ತೊಗಟೆ ಹೊಂದಿದ ಕಾಯಿಗಳಾಗಿರಬೇಕು.
- ಸಾಮಾನ್ಯ 12 ಕಾಯಿಗಳಿಂದ ಒಂದು ಕೆ.ಜಿ. ಯಷ್ಟು ಬೀಜ ಸಿಗುವಂತಿರಬೇಕು.
- ಸರಾಸರಿ 35 ಬೀಜಗಳಿಗಿಂತ ಅಧಿಕ ಬೀಜಗಳನ್ನು ಹೊಂದಿದ ಕಾಯಿಗಳಾಗಿರಬೇಕು.
- ಕಾಯಿಯ ಮಧ್ಯಭಾಗದಲ್ಲಿರುವ ಬೀಜಗಳು ಬಿತ್ತಲು ಯೋಗ್ಯವಾಗಿವೆ.
- ಒಂದು ಒಣ ಬೀಜದ ತೂಕ ಒಂದು ಗ್ರಾಂಗಿಂತ ಅಧಿಕವಿರಬೇಕು.

## ನರ್ಸರಿ ವಿಧಗಳು

### 1. ಮಡಿಗಳಲ್ಲಿ ಗಿಡ ಬೆಳೆಸುವ ವಿಧಾನ


- ಹೆಚ್ಚಾಗಿ ರೈತರು ತಮ್ಮ ಸ್ವಂತ ನಾಟಿಗಾಗಿ ಕೊಕ್ಕೋ ಗಿಡಗಳನ್ನು ಮಡಿಗಳಲ್ಲಿ ಬಿತ್ತಿ ಬೆಳೆಸುತ್ತಾರೆ.
- ನೀರಾವರಿ ಲಭ್ಯವಿರುವ ಫಲವತ್ತಾದ ಸಾಕಷ್ಟು ಸೂರ್ಯ ಪ್ರಕಾಶ ಲಭ್ಯವಿರುವ ಸಮತಟ್ಟಾದ ಜಾಗವನ್ನು ಆಯ್ದುಕೊಳ್ಳುವುದು.
- ಮಣ್ಣನ್ನು ಅಗತೆ ಮಾಡಿ ಹಸನುಗೊಳಿಸುವುದು.
- 90-120 ಸೆಂಟಿಮೀಟರ್ ಅಗಲದ ಮತ್ತು ಅನುಕೂಲಕರವಾದ ಉದ್ದದಲ್ಲಿ ಮಡಿಗಳನ್ನು ನಿರ್ಮಿಸಿ.
- ಎರಡು ಮಡಿಗಳ ಮಧ್ಯೆ 60 ಸೆ.ಮೀ ಅಂತರವಿರಲಿ. ಇದು ನರ್ಸರಿಯನ್ನು ಗಮನಿಸಲು ಅನುಕೂಲವಾಗಿರುತ್ತದೆ.
- 4 ರಿಂದ 6 ತಿಂಗಳ ಕಾಲ ಸಸಿಗಳು ಮಡಿಗಳಲ್ಲಿ ಇರಬೇಕಾಗುವುದರಿಂದ ಬೀಜಗಳನ್ನು ನೆಡುವಾಗ ಸಾಕಷ್ಟು ಅಂತರವನ್ನು ಕಾಯ್ದುಕೊಳ್ಳುವುದು.
- ಎಳೆಯ ಗಿಡಗಳನ್ನು ಹೆಚ್ಚಾದ ಬಿಸಿಲಿನಿಂದ ರಕ್ಷಿಸಲು ಸುಮಾರು 180 ಸೆ.ಮೀ. ಎತ್ತರದಲ್ಲಿ ನೆರಳಿನ ವ್ಯವಸ್ಥೆ ಮಾಡುವುದು. (ನೆರಳು ಪರದೆ ಬಳಸುವುದು ಉತ್ತಮ)
- ಆರೋಗ್ಯವಂತ ದೃಢವಾದ ಗಿಡಗಳನ್ನು ಆಯ್ಕೆ ಮಾಡಿ ನಡುವುದಕ್ಕೆ ಉಪಯೋಗಿಸಿ

## 2. ತೊಟ್ಟೆಗಳಲ್ಲಿ ಗಿಡ ಬೆಳೆಸುವ ವಿಧಾನ

- ತೊಟ್ಟೆ ಮತ್ತು ಬುಟ್ಟಿಗಳಲ್ಲಿ ಬೀಜ ಬಿತ್ತಲು ಸುಲಭ ಮತ್ತು ಇದು ಗಿಡಗಳ ಬೇರಿನ ಮತ್ತು ಚಿಗುರುಗಳ ಉತ್ತಮ ಬೆಳವಣಿಗೆಗೆ ಪೂರಕ.
- 6''9'' ಅಳತೆಯ 250 ಗೇಜ್ ದಪ್ಪದ ತೊಟ್ಟೆಗಳಲ್ಲಿ 2:1:1 ಪ್ರಮಾಣದಲ್ಲಿ ಮಣ್ಣು, ಮರಳು ಮತ್ತು ಹಟ್ಟಿಗೊಬ್ಬರದ ಮಿಶ್ರಣವನ್ನು ತುಂಬಿಸಬೇಕು.
- ಕೆಲವೊಂದು ಕೊಕ್ಕೊ ಬೆಳೆಯುವ ರಾಷ್ಟ್ರಗಳಲ್ಲಿ ಬಿದಿರಿನ ಅಥವಾ ಇತರ ಬಳ್ಳಿಗಳಿಂದ ಮಾಡಿದ ಬುಟ್ಟಿಗಳನ್ನು ಉಪಯೋಗಿಸುತ್ತಾರೆ. ಇದು ಮಣ್ಣಿನಲ್ಲಿ ಸೇರಿ ಹೋಗುತ್ತದೆ.
- ಗಿಡಗಳನ್ನು ಅಧಿಕಕಾಲ ನರ್ಸರಿಯಲ್ಲಿ ಇಡಬೇಕಾಗಿದ್ದಲ್ಲಿ 30 ಸೆ.ಮೀ ಎತ್ತರ ಮತ್ತು 20 ಸೆ.ಮೀ ಅಗಲದ ತೊಟ್ಟೆಗಳನ್ನು ಉಪಯೋಗಿಸುವುದು.
- ತೊಟ್ಟೆಗಳನ್ನು ವ್ಯವಸ್ಥಿತವಾಗಿ ಜೋಡಿಸಿ ನಡುವೆ ಓಡಾಡಲು (ಗಮನಿಸಲು) ಅಂತರ ಇಟ್ಟುಕೊಳ್ಳುವುದು.
- ಶೇಡ್‌ನೆಟ್ ಅಥವಾ ಇತರ ಸಲಕರಣೆಗಳನ್ನು ಬಳಸಿ ನೆರಳಿನ ವ್ಯವಸ್ಥೆ ಮಾಡುವುದು.
- ಸಣ್ಣ ಗಿಡಗಳು ಹೆಚ್ಚು ನೀರನ್ನು ಅಪೇಕ್ಷಿಸುವ ಕಾರಣ ಅವುಗಳಿಗೆ ಪ್ರತಿ ನಿತ್ಯ ನೀರುಣಿಸಬೇಕು. ಬೇಸಿಗೆಯಲ್ಲದ ದಿನಗಳಲ್ಲಿ ದಿನ ಬಿಟ್ಟು ದಿನ ನೀರುಣಿಸಿದರೆ ಸಾಕಾಗುತ್ತದೆ.
- ವ್ಯವಸ್ಥಿತ ಬಸಿಗಾಲುವೆಗಳನ್ನು ಒದಗಿಸುವುದರಿಂದ ನೀರು ನಿಲ್ಲುವುದನ್ನು ತಡೆದು ಗಿಡ ಕೊಳೆಯುವುದನ್ನು ತಪ್ಪಿಸಬಹುದು.



ತಾಯಿ ಗಿಡದ ಲಕ್ಷಣ



ಬೀಜ ಆಯ್ಕೆಯಲ್ಲಿ ಕಾಯಿಯ ಮಧ್ಯಭಾಗ

### ಬೀಜ ಬಿತ್ತುವುದು

- ಆಯ್ದ ಮರಗಳಿಂದ ದೊಡ್ಡ ದೊಡ್ಡ ಕಾಯಿಗಳನ್ನು ತಂದು ಅದರಿಂದ ದೊಡ್ಡ ದೊಡ್ಡ ಬೀಜಗಳನ್ನು ಬೇರ್ಪಡಿಸಿ ಬಿತ್ತಲು ಉಪಯೋಗಿಸಬೇಕು.
- ಕೊಯ್ಲು ಮಾಡಿದ ಕಾಯಿಗಳನ್ನು ಒಂದು ವಾರದ ಒಳಗೆ ಒಡೆದು ಬೀಜಗಳನ್ನು ತಕ್ಷಣ ಬಿತ್ತಲು ಉಪಯೋಗಿಸಬೇಕು.
- ಬೀಜದ ಮೇಲೆ ಅಂಟಿಕೊಂಡ ಲೋಳೆಯನ್ನು ತೆಗೆಯಲು ಬೂದಿ ಅಥವಾ ಮರಳಿನಿಂದ ಜಾಗರೂಕತೆಯಿಂದ/ಮೃದುವಾಗಿ ತಿಕ್ಕಿ ತೆಗೆಯಿರಿ.
- ಬೀಜದ ಮೊಳಕೆ ಒಡೆಯುವ ಭಾಗ ಕೆಳಮುಖವಾಗಿ ಇಲ್ಲವೇ ಅಡ್ಡವಾಗಿ ಬಿತ್ತಿ ಮರಳಿನಿಂದ ಮುಚ್ಚಿದಂತಿರಬೇಕು.
- ಬೀಜಗಳನ್ನು ಮಣ್ಣಿನಲ್ಲಿ ಆಳವಾಗಿ ನೆಡಬಾರದು ಏಕೆಂದರೆ ಗಾಳಿಯ ಕೊರತೆ ಮೊಳಕೆ ಬರುವ ಪ್ರಕ್ರಿಯೆಯ ಮೇಲೆ ದುಷ್ಪರಿಣಾಮ ಬೀರುವುದು.
- ಒಂದು ವಾರದಿಂದ ಎರಡು ವಾರಗಳಲ್ಲಿ ಮೊಳಕೆ ಬರುವುದು.
- ಸುಮಾರು 90 ಶತಮಾನ ಮೊಳಕೆ ಬರುವುದು.
- ಕೊಕ್ಕೊ ಬೀಜಗಳು ವರ್ಷದ ಎಲ್ಲಾ ಕಾಲಗಳಲ್ಲಿ ಮೊಳಕೆ ಬರುವುದು. ಮೇ ತಿಂಗಳಲ್ಲಿ ಕಾಯಿಗಳು ಸಿಗಲು ಪ್ರಾರಂಭಿಸಿದಾಗಲೇ ಬೀಜ ಬಿತ್ತಲು ಶುರು ಮಾಡಬಹುದು. ಹೆಚ್ಚಾದ ಮಳೆಯು ಮೊಳಕೆಯೊಡೆಯುವ ಪ್ರಕ್ರಿಯೆಯ ಮೇಲೆ ದುಷ್ಪರಿಣಾಮವಾಗುತ್ತದೆ.
- ಮೇ ತಿಂಗಳಲ್ಲಿ ಬಿತ್ತಿದ ಬೀಜಗಳಿಂದ ಪಡೆದ ಗಿಡಗಳು ಮಳೆಬೀಳುವ ಪ್ರದೇಶಗಳಲ್ಲಿ ಹಿಂಗಾರು ಮಳೆ ಕಾಲದಲ್ಲಿ ಅಂದರೆ ಸೆಪ್ಟೆಂಬರ-ಅಕ್ಟೋಬರ ತಿಂಗಳಲ್ಲಿ ನೆಡಲು ಲಭಿಸುತ್ತವೆ.
- ಮೇ ತಿಂಗಳಲ್ಲಿ ಗಿಡ ನೆಡಲು ಸಿಗಬೇಕಿದ್ದರೆ ದಶಂಬರ-ಜನವರಿ ತಿಂಗಳಲ್ಲಿ ಬೀಜ ಬಿತ್ತಬೇಕು.

### ಸಾಮಾನ್ಯ ಆದ್ಯತೆ

- ಉತ್ತಮ ಗುಣಮಟ್ಟದ ಬೀಜಗಳನ್ನು ಅಧಿಕ ಇಳುವರಿ ಕೊಡುವ ತಳಿಗಳ ಅಥವಾ ಸಂಕರ ತಳಿಗಳ ತೋಟಗಳಿಂದ ಆಯ್ದುಕೊಳ್ಳಬೇಕು.
- ಅಂತಹ ತೋಟಗಳಿಂದ ಬೀಜಗಳನ್ನು ಸಂಗ್ರಹಿಸಲು ಅಸಾಧ್ಯವಾದಲ್ಲಿ ಅಧಿಕ ಇಳುವರಿ ಕೊಡುವ ತಾಯಿ ಮರಗಳನ್ನು ಗುರುತಿಸಿ ಅವುಗಳಿಂದ ಬೀಜಗಳನ್ನು ಆಯ್ದುಕೊಳ್ಳಬೇಕು.
- ತೇವಭರಿತ ಚಾರ್ಕೊಲ್ (ಮಸಿ) ಜತೆಯಲ್ಲಿ ಬೀಜಗಳನ್ನು ಪಾಲಿಥೀನ್ ಚೀಲಗಳಲ್ಲಿ ತುಂಬಿಸಿ ಬೀಜಗಳ ಜೀವಧಾರಣಾ ಸಾಮರ್ಥ್ಯ ಮತ್ತು ತಾಜಾತನವನ್ನು ಕೆಲವೊಂದು ದಿನಗಳ ಕಾಲ ಇಟ್ಟುಕೊಂಡು ಆಮೇಲೆ ಬಿತ್ತಬಹುದು.



ಬೀಜಗಳನ್ನು ಮರಳಿನಲ್ಲಿ ಮಿಶ್ರಣ ಮಾಡುವುದು



ಬೀಜ ಬಿತ್ತುವುದು



ನರ್ಸರಿ ಮಡಿ



ತೊಟ್ಟೆಗಳಲ್ಲಿ ನರ್ಸರಿ


## ತಳಿಗಳ ತೋಟ ಮತ್ತು F1 ಹೈಬ್ರಿಡ್‌ಗಳ ಉತ್ಪಾದನೆ

ಮೂಲ ತಳಿಯ ಸಾಧನೆ ಹಾಗೂ ಗುಣಗಳನ್ನು ಹೊಂದಿರುವ ಬೀಜಗಳನ್ನು ಉತ್ಪಾದಿಸಲು ಕೊಕ್ಕೋದ ಮೂಲತಳಿ ತೋಟ ಅವಶ್ಯಕ. ಬೀಜಗಳಿಂದ ಕೊಕ್ಕೊ ವಂಶಾಭಿವೃದ್ಧಿಯು ಅತ್ಯಂತ ಸುಲಭ ವಿಧಾನವಾಗಿದೆ. ಆದರೆ ಪರಕೀಯ ಪರಾಗಸ್ಪರ್ಶದಿಂದ ಉತ್ಪತ್ತಿಯಾದ ಬೀಜದಿಂದ ಪಡೆದ ಸಸಿಗಳು ಹೆಚ್ಚಿನ ವ್ಯತ್ಯಾಸವನ್ನು ಹೊಂದಿರುತ್ತವೆ. ವಿವಿಧ ಪರೀಕ್ಷೆಗಳಿಂದ ಉತ್ತಮವೆಂದು ತಿಳಿದು ಬಂದ ತಳಿಗಳನ್ನು ಬೀಜೋತ್ಪಾದನೆಗೆ ಸೂಕ್ತ ಎಂದು ಆಯ್ಕೆ ಮಾಡಲಾಗುತ್ತದೆ.


ಸಿ.ಪಿ.ಸಿ.ಆರ್.ಐ., ಪ್ರಾಂತೀಯ ಕ್ಷೇತ್ರ, ವಿಟ್ಲ ಹಾಗೂ ಸಿ.ಪಿ.ಸಿ.ಆರ್.ಐ. ಸಂಶೋಧನಾ ಕೇಂದ್ರ, ಕಿಡುವಿನಲ್ಲಿ ಮೂಲ ತಳಿ ತೋಟಗಳು ಹಾಗೂ ಎಫ್ - ೧ ಸಂಕರ ತಳಿಗಳ ಉತ್ಪಾದನೆಗಾಗಿ ವ್ಯವಸ್ಥಿತ ಯೋಜನೆಗಳನ್ನು ರೂಪಿಸಿದ್ದು ಅನಗತ್ಯ ಪರಾಗಕ್ರಿಯೆ ನಡೆಯದಂತೆ ತೋಟ ವಿನ್ಯಾಸ ರೂಪಿಸಲಾಗಿದೆ. ವಾಣಿಜ್ಯ ಉದ್ದೇಶಿತ ಕೊಕ್ಕೊ ಬೆಳೆಗಾರರಿಗೆ ಇದು ಸಾಧ್ಯವಿಲ್ಲದ ವಿಚಾರವಾಗಿದ್ದು ಕೊಕ್ಕೋ ಬೆಳೆಗಾರರು ಇದನ್ನು ಗಮನಿಸಬೇಕಾಗಿದೆ. ಕೇರಳ ಕೃಷಿ ವಿಶ್ವ ವಿದ್ಯಾಲಯದಲ್ಲಿ ಮೂಲ ತಳಿಯ ಉತ್ಪಾದನೆಯ ತೋಟಗಳನ್ನು ಅಭಿವೃದ್ಧಿಗೊಳಿಸಿರುತ್ತಾರೆ.

ಗುರುತಿಸಿಕೊಂಡ ತಾಯಿ ಗಿಡಗಳಿಂದ ಮೃದುಕಾಂಡ ಕಸಿ ವಿಧಾನದಿಂದ ಗಿಡಗಳನ್ನು ಪಡೆದು ತೋಟವನ್ನು ಮಾಡುವುದು.

| ದ್ವಿ - ವಿಧ ತಳಿಗಳು | ಬಹು ತಳಿಗಳು |
|---|---|
| I-56 & NC-42/ 94 | I-14 |
| ICS-6 & SCA-6 | I-56 |
| I-56 & III-105 | III-105 |
| I-14 & NC-42/ 94 | NC-42/ 94 |
| I-14 & I-56 | |
| I-14 & IV-20 | |



ದ್ವಿವಿಧ ತಳಿಗಳ ತೋಟ



ಬಹು ತಳಿಗಳ ತೋಟ


## ತೋಟಗಳನ್ನು ನಿರ್ಮಿಸುವ ವಿಧಾನ

### ಸ್ಥಳದ ಆಯ್ಕೆ

ಹೊಸದಾಗಿ ಕೊಕ್ಕೋ ಗಿಡಗಳನ್ನು ಬೆಳೆಸಲು ತೆಂಗು ಮತ್ತು ಅಡಿಕೆ ತೋಟಗಳನ್ನು ಆಯ್ದು ಕೊಳ್ಳಬಹುದು.

### ಗಿಡಗಳ ನಡುವಿನ ಅಂತರ


ತೆಂಗಿನ ತೋಟದಲ್ಲಿ ತೆಂಗುಗಳ ಅಂತರವು 7.5ಮೀ x 7.5ಮೀ ಇರುವಲ್ಲಿ ಎರಡು ತೆಂಗಿನ ಸಾಲಿನ ಮಧ್ಯೆ 2.7ಮೀ ಅಂತರದಲ್ಲಿ ಒಂದು ಸಾಲು ಕೊಕ್ಕೋ ನಡಬಹುದು. ತೆಂಗಿನ ಅಂತರವು 7.5 x 7.5ಮೀ.ಗಿಂತ ಅಧಿಕ ಇದ್ದಲ್ಲಿ ತೆಂಗಿನ ಬುಡದಿಂದ 3ಮೀ ಅಂತರ ಕಾಯ್ದುಕೊಂಡು 2.5 x 2.7 ಮೀ. ಅಂತರಗಳಲ್ಲಿ ಎರಡು ಸಾಲು ಕೊಕ್ಕೋ ನಡಬಹುದು. ಅಡಿಕೆ ತೋಟಗಳಲ್ಲಿ ಅಡಿಕೆಯು 2.7ಮೀx2.7ಮೀ. ಅಂತರಗಳಲ್ಲಿರುವಲ್ಲಿ ಕೊಕ್ಕೋ ಗಿಡಗಳನ್ನು ನಾಲ್ಕು ಅಡಿಕೆ ಮರಗಳ ಮಧ್ಯೆ ಒಂದು ಬರುವಂತೆ ಒಂದು ಸಾಲು ಬಿಟ್ಟು ಒಂದು ಸಾಲಿನಲ್ಲಿ ಅಂದರೆ 2.7ಮೀx5.4ಮೀ. ಅಂತರದಲ್ಲಿ ನಡಬಹುದು.





ಅಡಿಕೆ ತೋಟದಲ್ಲಿ ಕೊಕ್ಕೋ



ಎಳೆಯ ಕೊಕ್ಕೋ ತೋಟ




ತೆಂಗಿನ ತೋಟದಲ್ಲಿ ಒಂದು ಸಾಲಿನಲ್ಲಿ ಕೊಕ್ಕೋ




ತೆಂಗಿನ ತೋಟದಲ್ಲಿ ಎರಡು ಸಾಲಿನಲ್ಲಿ ಕೊಕ್ಕೋ

## ಜೂನ್

| | |
|---|---|
| ನರ್ಸರಿಯಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ನೀರಾವರಿ : ಮಳೆಯ ಪ್ರಮಾಣವನ್ನು ಗಮನಿಸಿ ಅವಶ್ಯವಿದ್ದರೆ ನೀರುಣಿಸುವುದು. ಕಳೆ ಕೀಳುವುದು. |
| | ಗಿಡಗಳಿಗೆ ರೋಗ ತಗಲುವ ಬಗ್ಗೆ ನಿಗಾ ವಹಿಸುವುದು. ಸಾಕಷ್ಟು ಬಸಿಗಾಲುವೆಯನ್ನು ನಿರ್ಮಿಸುವುದು ಮತ್ತು ಬಸಿಗಾಲುವೆಯನ್ನು ಸ್ವಚ್ಛಗೊಳಿಸುವುದು. |
| ತೋಟಗಳಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಗಿಡ ನೆಡುವ ಕಾರ್ಯ ಕೈಗೊಳ್ಳುವುದು. |
| | ಗಿಡ ನೆಟ್ಟ ಮೇಲೆ ಗಿಡದ ಬುಡಗಳನ್ನು ಹಸಿರೆಲೆಗಳಿಂದ ಮುಚ್ಚುವುದು. |
| | ಗಿಡಗಳು ಅಲ್ಲಾಡದಂತೆ ಮತ್ತು ಬಾಗದಂತೆ ಆಧಾರ ಕೋಲುಗಳನ್ನು ನೆಟ್ಟುಕಟ್ಟುವುದು. |
| | ಹೆಣೆದ ತೆಂಗಿನ ಗರಿಗಳನ್ನು ಬಳಸಿ ಅಥವಾ ಬಾಳೆಗಿಡಗಳನ್ನು ನೆಟ್ಟು ಗಿಡಗಳಿಗೆ ನೆರಳು ಒದಗಿಸುವುದು. |
| | ನೆಟ್ಟ ದಿನಗಳಲ್ಲಿ ಮಳೆ ಬಾರದೆ ಇದ್ದಲ್ಲಿ ಜೀವ ತುಂಬಲು ನೀರುಣಿಸುವುದು. |
| | ಹಸಿರು ಹೊದಿಕೆಯಾಗಿ ಸನ್ ಹಾಂಪ್ ಬೀಜಗಳನ್ನು ಬಿತ್ತಿ ಮಣ್ಣಿನ ಸವಕಳಿ ಮತ್ತು ಕಳೆ ನಿಯಂತ್ರಿಸಬಹುದು.(ಎಕ್ರೆಗೆ 20 ಕೆ.ಜಿ.) |
| | ಹನಿ ನೀರಾವರಿ ಪೈಪುಗಳನ್ನು ಸುತ್ತಿಡುವುದು. |
| | ಬಸಿಗಾಲುವೆಯನ್ನು ಸ್ವಚ್ಛಗೊಳಿಸುವುದು. |
| | ಮೂಲಕಾಂಡದಿಂದ ಮೂಡಿ ಬಂದ ಚಿಗುರುಗಳನ್ನು ಕತ್ತರಿಸುವುದು. |
| | ಹಣ್ಣಾದ ಕಾಯಿಗಳನ್ನು ಜಾಗರೂಕತೆಯಿಂದ ಕೊಯ್ಲು ಮಾಡುವುದು. |
| | ನೀರಾವರಿ ರಹಿತ ತೋಟಗಳಲ್ಲಿ ಆರಂಭಿಕ ಮಳೆಬಿದ್ದ ನಂತರ ಗೊಬ್ಬರಗಳನ್ನು ಹಾಕುವುದು. |

### ಗಿಡ ನೆಡುವಿಕೆ :

- ಬಲಿಷ್ಠವಾದ ಗಿಡಗಳನ್ನು ನೆಡಲು ಉಪಯೋಗಿಸುವುದು.
- ಹೆಚ್ಚಾದ ನೆರಳಿನಲ್ಲಿ ಬೆಳೆಸಿದ ಗಿಡಗಳನ್ನು ಹೆಚ್ಚು ಕಡಿಮೆ 10 ದಿನಗಳ ಕಾಲ ಬಿಸಿಲು ಬೀಳುವಂತೆ ಮಾಡಿ ಆಮೇಲೆ ನೆಡಲು ಉಪಯೋಗಿಸುವುದು.
- ಮಡಿಗಳಿಂದ ಗಿಡ ಕೀಳುವ ಮೊದಲೇ ನೀರು ಹಾಯಿಸಿ ಮೃದುಗೊಳಿಸಿ ಅನಂತರ ಗಿಡಗಳ ಬೇರಿಗೆ ಪೆಟ್ಟಾಗದಂತೆ ಮಣ್ಣು ಸಹಿತ ತೆಗೆದು ನೆಡಲು ಉಪಯೋಗಿಸಿ.
- ಪಾಲಿಥೀನ್ ಚೀಲಗಳನ್ನು ತೆಗೆದು ಮಣ್ಣು ಸಹಿತ ಗುಂಡಿಗಳಲ್ಲಿ ನೆಡುವುದು.
- ಗಿಡಗಳು/ಕಸಿಗಿಡಗಳು/ಮೊಗ್ಗು ಕಸಿ ಮಾಡಿದ/ಗಿಡಗಳನ್ನು ಗುಂಡಿಯ ಮಧ್ಯದಲ್ಲಿ ನೆಡುವುದು.
- ಬಿದಿರಿನಿಂದ ಅಥವಾ ಬಳ್ಳಿಗಳಿಂದ ಮಾಡಿದ ಬುಟ್ಟಿಗಳಲ್ಲಿ ಗಿಡಗಳಿದ್ದಲ್ಲಿ ಅವುಗಳನ್ನು ಹಾಗೆಯೇ ನೆಡಬಹುದು.
- ಕಸಿ ಗಿಡಗಳನ್ನು ನೆಟ್ಟ ಬಳಿಕ ಕಸಿ ಭಾಗದಲ್ಲಿ ಸುತ್ತಿದ ಪ್ಲಾಸ್ಟಿಕನ್ನು ಬಿಡಿಸಿ ತೆಗೆಯಿರಿ. ಕಸಿ ಭಾಗವು ಮಣ್ಣಿನಿಂದ ಮೇಲೆ ಇರುವಂತೆ ನೆಡಬೇಕು.
- ನೆಡಲು ಉಪಯೋಗಿಸುವ ಗಿಡಗಳು 4-6ರಿಂದ ಆರು ತಿಂಗಳ ಬೆಳವಣಿಗೆ ಹೊಂದಿರಬೇಕು.





ಹೊಂಡ ತೆಗೆಯುವುದು ಮತ್ತು ನೆಡುವುದು


ಬುಡ ಮುಚ್ಚುವುದು


ಹನಿ ನೀರಾವರಿ ಕೊಳವೆಗಳನ್ನು ಸುತ್ತಿಡುವ ಕ್ರಮ


ನೆರಳು ಒದಗಿಸಿರುವುದು

| | |
|---|---|
| ನರ್ಸರಿಯಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಕಳೆ ನಿರ್ಮೂಲನೆ |
| | ಕೀಟಗಳನ್ನು ನಾಶ ಮಾಡುವುದು ಮತ್ತು ರೋಗಬಾಧಿತ ಗಿಡಗಳನ್ನು ಸುಡುವುದು. |
| | ನೆರಳು ಪರದೆಗಳನ್ನು/ವ್ಯವಸ್ಥೆಯನ್ನು ತೆಗೆಯುವುದು. |
| | ಬಸಿಗಾಲುವೆಯನ್ನು ಸ್ವಚ್ಛ ಇಟ್ಟುಕೊಳ್ಳುವುದು. |
| ತೋಟಗಳಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ತೋಟಗಳಲ್ಲಿ ನೆಟ್ಟ ಕಸಿಗಿಡಗಳ ಮೂಲ ಭಾಗದಲ್ಲಿ ಬಂದ ಚಿಗುರುಗಳನ್ನು ಕತ್ತರಿಸುವುದು. |
| | ಮಳೆಗಾಲದಲ್ಲಿ ಮಳೆ ನೀರು ನಿಲ್ಲದಂತೆ ಬುಡಗಳ ಸುತ್ತ ಮಣ್ಣುಗೂಡಿಸುವುದು ಮತ್ತು ಗಾಳಿಗೆ ಗಿಡಗಳು ಬೀಳದಂತೆ ಆಧಾರ ಕೊಡುವುದು. |
| | ಬಸಿಗಾಲುವೆಯನ್ನು ಚೆನ್ನಾಗಿ ಇಟ್ಟುಕೊಳ್ಳುವುದು. |
| | ಗಿಡ ಸಂರಕ್ಷಣೆಗೆ ಬೇಕಾದ ಕ್ರಮ ಕೈಗೊಳ್ಳುವುದು. |
| | ಕೊಯ್ಲು ಮುಂದುವರಿಸುವುದು. |

### ಕೊಯ್ಲು

ಕೊಕ್ಕೋ ಹೂ ಪರಾಗಸ್ಪರ್ಶ ಹೊಂದಿದ 150-170 ದಿನಗಳಲ್ಲಿ ಕಾಯಿ ಮಾಗಿ ಕೊಯ್ಲಿಗೆ ಸಿದ್ಧವಾಗುತ್ತದೆ. ಮಾಗಿದಾಗ ಹಸಿರುಕಾಯಿ ಹಳದಿ ಬಣ್ಣಕ್ಕೂ ಕೆಂಪುಕಾಯಿ ಕಿತ್ತಳೆ ಬಣ್ಣಕ್ಕೂ ಬದಲಾಗುತ್ತದೆ. ಬೆಳೆದ ಕಾಯಿ ಸುಮಾರು ಒಂದು ತಿಂಗಳ ಕಾಲ ಕೆಡದೆ ಗಿಡದಲ್ಲಿರಬಲ್ಲುದು. ಆದುದರಿಂದ 15 ದಿನಗಳಿಗೊಮ್ಮೆ ಕೊಯ್ಲು ಮಾಡಬಹುದು. ಆದರೆ ಕಾಯಿಕೊಳೆ ರೋಗ ಮತ್ತು ಅಳಿಲು ಇಲಿಗಳ ಬಾಧೆ ಇದ್ದಾಗ ಕಡಿಮೆ ದಿನಗಳ ಅಂತರದಲ್ಲಿ ಕೊಯ್ಲು ಮಾಡುವುದು ಸೂಕ್ತ. ಕರ್ನಾಟಕದಲ್ಲಿ ಕೊಯ್ಲಿನ ಮುಖ್ಯ ಭಾಗ ಮೇ ತಿಂಗಳಿನಿಂದ ಸಪ್ಟೆಂಬರ ತಿಂಗಳವರೆಗೆ ಇರುವುದು ಮತ್ತು ಅಕ್ಟೋಬರದಿಂದ ದಶಂಬರದವರೆಗೆ ಅಲ್ಪಸ್ವಲ್ಪ ಕಾಯಿ ಸಿಗುತ್ತಿರುತ್ತದೆ. ಕೊಯ್ಲು ಮಾಡಿದ ಕೋಡುಗಳನ್ನು ನಾಲ್ಕು ದಿನಗಳವರೆಗೆ ಒಡೆಯದೆ ಇಟ್ಟಾಗ ಹುಳಿಬರುವ ಪ್ರಕ್ರಿಯೆಯು ಕೋಡಿನ ಒಳಗೆ ನಡೆಯುತ್ತದೆ. ಇದರಿಂದ ಉತ್ತಮಗುಣ ಮಟ್ಟದ ಬೀಜಗಳು ಲಭಿಸುತ್ತವೆ. ಮಾರುಕಟ್ಟೆಗಳಲ್ಲಿ ಬೀಜಗಳನ್ನು ಮತ್ತು ಇಡೀಕೋಡುಗಳನ್ನು ಸಹಕೊಂಡು ಕೊಳ್ಳುತ್ತಾರೆ. ಕಾಯಿಗಳನ್ನು ಗಟ್ಟಿ ನೆಲದ ಮೇಲೆ ಬಡಿದು ಬೀಜಗಳನ್ನು ಬೇರ್ಪಡಿಸಿ ಮಾರಾಟ ಮಾಡಬಹುದು ಅಥವಾ ಹುಳಿಬರಿಸಿ ಸಂಸ್ಕರಿಸುವ ವ್ಯವಸ್ಥೆ ಇದ್ದಲ್ಲಿ ಅದನ್ನು ಕೈಗೊಳ್ಳುವುದು.

### ಕಾಯಿ ಕೊಳೆಯುವ ರೋಗ (Black pod disease)

ದಕ್ಷಿಣ ಭಾರತದ ಕೊಕ್ಕೋ ಬೆಳೆಯುವ ಎಲ್ಲಾ ಪ್ರದೇಶಗಳಲ್ಲಿ ಮುಂಗಾರಿನಲ್ಲಿ (ಜುಲೈ-ಆಗಸ್ಟ್) ಈ ರೋಗ ಕಂಡು ಬರುತ್ತದೆ. ಎಲ್ಲಾ ಪ್ರಾಯದ ಕೊಕ್ಕೊ ಕಾಯಿಗಳ ಮೇಲ್ಮೈಯ ಯಾವುದೇ ಭಾಗದಲ್ಲಿ ಈ ರೋಗ ಕಾಣಿಸಿಕೊಳ್ಳಬಹುದು. ದಂಶಕಗಳಿಂದ ಕೀಟಗಳಿಂದ, ಕೊಯ್ಯುವ ಸಮಯದಲ್ಲಿ ಅಥವಾ ಇನ್ನಾವುದೇ ಕೃಷಿ ಚಟುವಟಿಕೆಯಿಂದ ಕಾಯಿಗೆ ಗಾಯವಾಗಿದ್ದಲ್ಲಿ ಈ ರೋಗ ಬರುವ ಸಾಧ್ಯತೆ ಹೆಚ್ಚು. ಕಂದು ಬಣ್ಣದಿಂದ ಪ್ರಾರಂಭವಾಗುವ ಈ ರೋಗ ಸ್ವಲ್ಪವೇ ಸಮಯದಲ್ಲಿ ಕಾಯಿಯ ಸಂಪೂರ್ಣ ಮೇಲ್ಮೈಯನ್ನು ಆವರಿಸಿಕೊಳ್ಳುತ್ತದೆ. ರೋಗ ಹೆಚ್ಚಾದಂತೆ ಶಿಲೀಂಧ್ರದ ಬೀಜ ಕಣಗಳು ಕಾಯಿಯ ಮೇಲ್ಮೈಯಲ್ಲಿ ಬೆಳೆಯುತ್ತವೆ. ಕೊನೆಯಲ್ಲಿ ಕಾಯಿಗಳು ಕಂದು ಬಣ್ಣದಿಂದ ಕಪ್ಪು ಬಣ್ಣಕ್ಕೆ ತಿರುಗುತ್ತವೆ. ಒಳಗಿನ ಅಂಗಾಂಶ ಮತ್ತು ಬೀಜಗಳು ಬಣ್ಣ ಕಳೆದುಕೊಳ್ಳುತ್ತವೆ. ಹಣ್ಣಾಗುತ್ತಿರುವ ಕಾಯಿಗಳು ರೋಗಕ್ಕೆ ತುತ್ತಾದರೆ ಅವುಗಳಲ್ಲಿರುವ ಬೀಜಗಳು ಸಿಪ್ಪೆಯಿಂದ ಬೇರ್ಪಟ್ಟಿರುವುದರಿಂದ ಈ ರೋಗದಿಂದ



ಚೂಪಾನಗಳನ್ನು ತೆಗೆಯುವುದು



ಕೊಯ್ಲು

ತಪ್ಪಿಸಿಕೊಂಡಿರುತ್ತವೆ. ಹಾಗಾಗಿ ಸಮಯಕ್ಕೆ ಸರಿಯಾಗಿ ಅಂತಹ ಕಾಯಿಗಳನ್ನು ಕ್ಯೊದು ಅವುಗಳ ಬೀಜಗಳನ್ನು ಉಳಿಸಿಕೊಳ್ಳಬಹುದು.

ಈ ರೋಗದ ನಿಯಂತ್ರಣಕ್ಕೆ ಮುಂಗಾರಿನ ಪ್ರಾರಂಭದಲ್ಲಿ ಮತ್ತು ಅನಂತರ ಒಂದು ತಿಂಗಳ ಅಂತರದಲ್ಲಿ 2 ಬಾರಿ 1% ಬೋರ್ಡೋ ದ್ರಾವಣವನ್ನು ಸಿಂಪಡಿಸಬೇಕು. ರೋಗ ಬಾಧಿತ ಕಾಯಿಗಳನ್ನು ಕಾಲಕಾಲಕ್ಕೆ ಕೊಯ್ದು ನಾಶ ಮಾಡುವುದರಿಂದ ರೋಗದ ತೀವ್ರತೆಯನ್ನು ತಡೆಯಬಹುದು. ಶಿಫಾರಸು ಮಾಡಿದ್ದಕ್ಕಿಂತ ಹೆಚ್ಚು ಮರಗಳು ಮತ್ತು ದಟ್ಟ ನೆರಳು ತೋಟದಲ್ಲಿ ಇರದಂತೆ ನೋಡಿಕೊಳ್ಳಬೇಕು.

### ಬಿಳಿ ದಾರದಂತಹ ಮುಚ್ಚಿ ರೋಗ (White thread blight)

ಕರ್ನಾಟಕ ಹಾಗೂ ಕೇರಳದ ಕೆಲವೊಂದು ತೋಟಗಳಲ್ಲಿ ಈ ರೋಗವು ಕಾಣಿಸಿದೆ. ಎಳೆಯ ಕಾಂಡ ಮತ್ತು ರೆಂಬೆಗಳ ಮೇಲೆ ಈ ಶಿಲೀಂಧ್ರವು ವೇಗವಾಗಿ ಬೆಳೆಯುತ್ತದೆ ಮತ್ತು ಎಲೆಯ ತೊಟ್ಟಿನ ಮೂಲಕ ರೋಗವು ಎಲೆಗೂ ಹರಡುತ್ತದೆ. ಸೋಂಕು ತಗುಲಿದ ಎಲೆಗಳು ದಟ್ಟ ಕಂದು ಬಣ್ಣಕ್ಕೆ ತಿರುಗುತ್ತವೆ. ಈ ಸತ್ತ ಎಲೆಗಳು ಕಾಂಡದಿಂದ ಬೇರ್ಪಟ್ಟರೂ ತಂತುಜಾಲದ ದಾರದಿಂದ ಗಿಡಕ್ಕೆ ಅಂಟಿಕೊಂಡಿರುತ್ತವೆ. ಬಹಳಷ್ಟು ಎಳೆಯ ರೆಂಬೆಗಳು ಸಾಯುವುದು ಮತ್ತು ಗಿಡಕ್ಕೆ ಅಂಟಿಕೊಂಡಿರುವ ಸತ್ತ ಎಲೆಗಳು ತೋಟದಲ್ಲಿ ಈ ರೋಗದ ಚಿನ್ಹೆಗಳು. ರೋಗಬಂದ ಭಾಗಗಳನ್ನು ಕತ್ತರಿಸಿ ಸುಟ್ಟು ನಾಶ ಮಾಡುವುದರಿಂದ ಈ ರೋಗವನ್ನು ನಿಯಂತ್ರಿಸಬಹುದು. ದಟ್ಟ ನೆರಳನ್ನು ಕಡಿಮೆ ಮಾಡುವುದರಿಂದಲೂ ಈ ರೋಗವನ್ನು ಸ್ವಲ್ಪ ಮಟ್ಟಿಗೆ ನಿಯಂತ್ರಿಸಬಹುದು.

### ವಾಹಕ ಪಟ್ಟೆ ಒಣಗುವ ರೋಗ (VSD - Vascular Streak Dieback)

ಕೇರಳದಲ್ಲಿ ಮಾತ್ರ ಈ ರೋಗ ಕಂಡುಬಂದಿದೆ. ಬೆಳೆಯುತ್ತಿರುವ ತುದಿಯಿಂದ ೨ ಅಥವಾ ೩ನೇ ಚಿಗುರಿನಲ್ಲಿ ೧ ಅಥವಾ ೨ ಎಲೆಗಳು ಹಳದಿಯಾಗುವುದು ಈ ರೋಗದ ಮೂಲ ಲಕ್ಷಣ. ಎಲೆಗಳು ಹಳದಿಯಾಗಿ ಕೆಲವು ದಿನಗಳಲ್ಲಿ ಕೆಳಗೆ ಬೀಳುತ್ತವೆ. ನಂತರ ಈ ಎಲೆಗಳ ಮೇಲೆ ಮತ್ತು ಕೆಳಗೆ ಇರುವ ಎಲೆಗಳು ಹಳದಿಯಾಗಿ ಬೀಳುತ್ತವೆ. ಸ್ವಲ್ಪ ದಿನಗಳಲ್ಲಿ ಆ ಕೊಂಬೆಯಲ್ಲಿ ತುದಿ ಹಾಗೂ ಬುಡದಲ್ಲಿ ಮಾತ್ರ ಎಲೆಗಳು ಇದ್ದು ಮಧ್ಯಭಾಗದ ಎಲೆಗಳು ಬಿದ್ದು ಹೋಗಿರುತ್ತವೆ. ರೋಗಗ್ರಸ್ಥ ರೆಂಬೆಯನ್ನು ಸೀಳಿದಾಗ ಒಳಭಾಗದಲ್ಲಿ ಅಂಗಾಂಶಗಳು ಕಂದು ಬಣ್ಣದ ಪಟ್ಟೆಯಾಗಿ ಕಾಣುತ್ತವೆ. ರೋಗಗ್ರಸ್ಥ ರೆಂಬೆಯ ಮೇಲೆ ಉತ್ಪತ್ತಿಯಾಗುವ ಶಿಲೀಂಧ್ರದ ಬೀಜಾಣುಗಳು ರಾತ್ರಿ ಹೊತ್ತು ಗಾಳಿಯ ಮೂಲಕ ಪಸರಿಸಿ ಈ ರೋಗವು ತೋಟದಲ್ಲಿ ಹರಡುತ್ತದೆ. ಕ್ರಮಬದ್ಧ ಸವರುವಿಕೆ ಹಾಗೂ ರೋಗಗ್ರಸ್ಥ ಭಾಗಗಳನ್ನು ಕತ್ತರಿಸಿ ಹಾಕುವುದರಿಂದ ಈ ರೋಗವನ್ನು ತಡೆಯಬಹುದು. ಸಸಿಗಳು ಈ ರೋಗಕ್ಕೆ ಬೇಗನೆ ತುತ್ತಾಗುವುದರಿಂದ ಸಸಿ ಮಡಿಗಳನ್ನು ರೋಗಗ್ರಸ್ಥ ತೋಟದ ಹತ್ತಿರ ಮಾಡಬಾರದು.



ಕಾಯಿ ಕೊಳೆ ರೋಗ



ಬಿಳಿ ದಾರದಂತಹ ಮಚ್ಚೆ ರೋಗ

## ನರ್ಸರಿಯಲ್ಲಿ ಬರುವ ರೋಗಗಳು

ಕೇರಳ ಕರ್ನಾಟಕ ಮತ್ತು ತಮಿಳುನಾಡು ಪ್ರದೇಶದ ನರ್ಸರಿಗಳಲ್ಲಿ ಮಳೆಗಾಲದಲ್ಲಿ ಕೊಳೆರೋಗ ಹಾಗೂ ಇತರ ಕೆಲವು ರೋಗಗಳು ಕಂಡು ಬರುತ್ತವೆ. ಎಳೆಯ ಕಸಿಗಿಡಗಳನ್ನು ಇವು ಹೆಚ್ಚಾಗಿ ಬಾಧಿಸುತ್ತವೆ. ಈ ರೋಗವು ಗಿಡಬುಡ ಮತ್ತು ಕಸಿಕಟ್ಟಿದ ಭಾಗವನ್ನು ಬಾಧಿಸಿದಾಗ ಎಲೆಗಳು ಕಂದು ಬಣ್ಣದಿಂದ ಕಪ್ಪು ಬಣ್ಣಕ್ಕೆ ತಿರುಗುತ್ತವೆ. ಇದು ಕ್ರಮೇಣ ಗಿಡದ ಎಲ್ಲಾ ಭಾಗಕ್ಕೆ ಹರಡಿ ಗಿಡಗಳ ಎಲೆಗಳು ಉದುರಿ ಗಿಡಗಳು ಸಾಯುತ್ತವೆ.

ರೋಗ ಹರಡುವುದನ್ನು ನಿಯಂತ್ರಿಸಲು ರೋಗ ಬಾಧಿತ ಗಿಡಗಳನ್ನು ನರ್ಸರಿಯಿಂದ ದೂರ ಮಾಡಿ ನಾಶಗೊಳಿಸಬೇಕು. ಸರಿಯಾದ ಬಸಿಗಾಲುವೆಯನ್ನು ನಿರ್ಮಿಸುವುದು ರೋಗ ನಿಯಂತ್ರಣಕ್ಕೆ ಅಗತ್ಯ 1% ಬೋರ್ಡೋ ದ್ರಾವಣ ಅಥವಾ 2% ಕಾಪ್ಪರ್ ಆಕ್ಸೀ ಕ್ಲೋರೈಡ್ ದ್ರಾವಣವನ್ನು ಮುಂಗಾರು ಮಳೆಯ ಮೊದಲು ಮತ್ತು ನಿಗದಿತ ದಿನಗಳ ಅಂತರದಲ್ಲಿ ಸಿಂಪಡಿಸಿ ರೋಗವನ್ನು ಹತೋಟಿ ಮಾಡುವುದು.



ವಾಹಕ ಪಟ್ಟೆ ಒಣಗುವ ರೋಗ



ಗಿಡ ಸೊರಗುವ ರೋಗ

**ಅಗೋಸ್ತು**

| | |
|---|---|
| ನರ್ಸರಿಯಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಕಳೆ ಕೀಳುವುದು ಮತ್ತು ರೋಗದ ಬಗ್ಗೆ ನಿಗಾವಹಿಸುವುದು ಅಗತ್ಯ ನಿವಾರಣಾ ಕ್ರಮ ಕೈಗೊಳ್ಳುವುದು. |
| | ಮೊಳಕೆ ಒಡೆಯದ ಖಾಲಿ ತೊಟ್ಟೆಗಳಿಗೆ ಮರು ಬೀಜ ಬಿತ್ತುವುದು. |
| | ಅವಶ್ಯವಿದ್ದರೆ ನೀರುಣಿಸುವುದು. |
| | ಬಸಿಗಾಲುವೆಗಳನ್ನು ಸುಸ್ಥಿತಿಯಲ್ಲಿಡುವುದು. |
| ತೋಟಗಳಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಮೂಲ ಕಾಂಡಗಳಲ್ಲಿ ಬಂದ ಚಿಗುರುಗಳನ್ನು ಕತ್ತರಿಸುವುದು. |
| | ಗಿಡಗಳ ಬುಡದ ಸುತ್ತ ಮಣ್ಣು ಸೇರಿಸುವುದು ಮತ್ತು ಗಿಡಗಳಿಗೆ ಆಧಾರ ಕೊಡುವುದು. |
| | ಬಸಿಗಾಲುವೆಗಳನ್ನು ಸುಸ್ಥಿತಿಯಲ್ಲಿಡುವುದು. |
| | ತೋಟಗಳಲ್ಲಿ ಕೊಳೆತ ಪದಾರ್ಥಗಳನ್ನು ಮತ್ತು ಒಣಗಿದ ಗೆಲ್ಲುಗಳನ್ನು ತೆಗೆಯುವುದು. |
| | ಗಾಳಿ ಮತ್ತು ಬೆಳಕು ಲಭಿಸಲು ಅನುಕೂಲವಾಗುವಂತೆ ಗಿಡಗಳನ್ನು ಸಣ್ಣ ಪ್ರಮಾಣದಲ್ಲಿ ಸವರುವುದು. ಗಿಡ ಸಂರಕ್ಷಣಾ ಕ್ರಮ ಕೈಗೊಳ್ಳುವುದು. |
| | ಕೊಯ್ಲು ಮುಂದುವರಿಸುವುದು. |

### ಸಸ್ಯ ಹೇನು *(Toxoptera aurantii* **B de F.)**

ಇವು ಎಳೆಯ ಎಲೆಯ ಕೆಳಭಾಗ, ಮೃದುವಾದ ಕಾಂಡ, ಮೊಗ್ಗು ಮತ್ತು ಎಳೆ ಕಾಯಿಗಳಲ್ಲಿ ಗುಂಪಾಗಿ ಇರುತ್ತವೆ. ತೀವ್ರ ಬಾಧೆಯಿದ್ದಲ್ಲಿ ಹೂಗಳು ಬಿದ್ದುಹೋಗುತ್ತವೆ ಮತ್ತು ಎಲೆಗಳು ಸುರುಟಿಕೊಳ್ಳುತ್ತವೆ. ಈ ಕೀಟದ ನಿಯಂತ್ರಣಕ್ಕೆ ೧೬೦ ಮಿ. ಲೀ. ಡೈಮಿಥೊಯೇಟ್ (ರೋಗರ್) ಕೀಟನಾಶಕವನ್ನು ೧೦೦ ಲೀ. ನೀರಿನಲ್ಲಿ ಮಿಶ್ರ ಮಾಡಿ ಸಿಂಪಡಿಸಬೇಕು.

### ಎಲೆ ತಿನ್ನುವ ಹುಳುಗಳು

ಇವುಗಳಲ್ಲಿ ಕೋಶದ ಹುಳು, ಕಂಬಳಿ ಹುಳು ಹಾಗೂ ಕುಣಿಕೆ ಹುಳುಗಳು ಸೇರುತ್ತವೆ. ಇವು ಎಳೆಯ ಎಲೆಗಳು, ಕಾಂಡಗಳು ಮತ್ತು ಕಾಯಿಯ ಹಸಿರು ಸಿಪ್ಪೆಯನ್ನು ತಿನ್ನುತ್ತವೆ. ಸಣ್ಣಸಸಿಗಳಲ್ಲಿ ಇವು ತೀವ್ರವಾಗಿ ಎಲೆಗಳನ್ನು ನಾಶಮಾಡುತ್ತವೆ. ಇವುಗಳಿಂದ ಹಾನಿ ತೀವ್ರವಾಗಿದ್ದಲ್ಲಿ ೧೬ಮಿ. ಲೀ. ಡೈಮಿಥೊಯೇಟ್ ಕೀಟನಾಶಕವನ್ನು ೧೦ ಲೀ. ನೀರಿನಲ್ಲಿ ಮಿಶ್ರ ಮಾಡಿ ಸಿಂಪಡಿಸಬೇಕು.

### ಎಳೆಕಾಯಿ ಸೊರಗು/ಕೊಳೆ ರೋಗ

ಎಳೆಯ ಕೊಕ್ಕೊ ಕಾಯಿಗಳು ಸೊರಗಿ / ಕುಗ್ಗಿ ಗಿಡದಲ್ಲಿಯೇ ಇರುವುದು ಸಾಮಾನ್ಯವಾಗಿ ಎಲ್ಲಾ ತೋಟಗಳಲ್ಲಿಯೂ ಕಾಣಬಹುದು. ಪ್ರಾರಂಭದಲ್ಲಿ ಕಾಯಿಗಳು ಹೊಳಪನ್ನು ಕಳೆದುಕೊಂಡು ೪-೭ ದಿನಗಳಲ್ಲಿ ಚಪ್ಪಟೆಯಾಗುತ್ತವೆ. ಇಂತಹ ಕಾಯಿಗಳು ಕೆಳಗೆ ಬೀಳದೆ ಗಿಡದಲ್ಲಿಯೇ ಅಂಟಿಕೊಂಡು ಇರುತ್ತವೆ. ಕೀಟ ಬಾಧೆ, ರೋಗ, ಆಹಾರದ ಕೊರತೆ, ಗಿಡದ ಸಾಮರ್ಥ್ಯಕ್ಕಿಂತ ಹೆಚ್ಚಿನ ಉತ್ಪಾದನೆ ಈ ರೋಗಕ್ಕೆ ಕೆಲವು ಕಾರಣಗಳು. ಮುಖ್ಯವಾಗಿ ಶಿಲೀಂಧ್ರ ಮತ್ತು ಗಿಡದ ಸಾಮರ್ಥ್ಯಕ್ಕಿಂತ ಹೆಚ್ಚಿನ ಉತ್ಪಾದನೆ ಈ ರೋಗಕ್ಕೆ ಕಾರಣ. ಶಿಲೀಂಧ್ರದಿಂದ ಈ ರೋಗ ಉಂಟಾದಾಗ ಕಾಯಿಯ ತೊಟ್ಟಿನ ಭಾಗದಿಂದ ಹಳದಿ ಮಿಶ್ರಿತ ದಟ್ಟ ಕಂದು ಬಣ್ಣದ ಗುರುತುಗಳು ಕಾಣುತ್ತವೆ. ಇದು ಮುಂದೆ ಇಡೀ ಕಾಯಿಗೆ ಹರಡುತ್ತದೆ. ಕೊನೆಯಲ್ಲಿ ಕಾಯಿಯು ದಟ್ಟ ಕಂದು ಬಣ್ಣಕ್ಕೆ ತಿರುಗಿ ಗಿಡದಲ್ಲಿಯೇ ಉಳಿಯುತ್ತದೆ. ಈ ರೀತಿ ಕೊಳೆಯುವ ರೋಗವು ಸಾಮಾನ್ಯವಾಗಿ ಫೆಬ್ರುವರಿಯಿಂದ ಮೇ ತಿಂಗಳವರೆಗೆ ಕಂಡುಬರುತ್ತದೆ. ಇದರ ನಿಯಂತ್ರಣಕ್ಕೆ ೫ ಗ್ರಾಂ ಬ್ಯಾವಿಸ್ಟಿನ್ (ಕಾರ್ಬಂಡೈಜಿನ್) ೧೦ ಲೀಟರ್ ನೀರಿನಲ್ಲಿ (೦.೦೫%) ಅಥವಾ ೨ ಮಿ.ಲೀ. ಇಂಡೋಫಿಲ್ ಎಮ್-೪೫, ೧ ಲೀಟರ್ ನೀರಿನಲ್ಲಿ (೦.೨%) ಮಿಶ್ರ ಮಾಡಿ ಸಿಂಪರಣೆ ಮಾಡಬೇಕು. ಗಿಡದ ಸಾಮರ್ಥ್ಯಕ್ಕಿಂತ ಹೆಚ್ಚಿನ ಉತ್ಪಾದನೆ ಇದ್ದಾಗ ಇಡಿಯ ಕಾಯಿಯು ಹಳದಿಯಾಗಿ ನಂತರ ಕಂದು ಹಾಗೂ ಕಪ್ಪು ಬಣ್ಣಕ್ಕೆ ತಿರುಗುತ್ತದೆ.



ಹೇನು



ಎಲೆ ತಿನ್ನುವ ಕಂಬಳಿ ಹುಳ




ಎಳೆಯ ಕಾಯಿ ಒಣಗಿರುವುದು

## ಎಳೆಯ ಗಿಡಗಳನ್ನು ಆಕಾರಕ್ಕೆ ತರುವುದು

**ಆಕಾರಕ್ಕೆ ತರಲು ಮಾಡುವ ಸವರುವಿಕೆ :** ಗಿಡಗಳು ಸುಮಾರು 14 ತಿಂಗಳ ಬೆಳವಣಿಗೆಯ ಅನಂತರ ಟಿಸಿಲು ಒಡೆಯಲು ಪ್ರಾರಂಭ ಮಾಡುತ್ತವೆ. ಗಿಡಗಳ ಸರಿಯಾದ ಮತ್ತು ವ್ಯವಸ್ಥಿತವಾದ ಹರಡುವಿಕೆಯನ್ನು ಮಾಡಲು ಸವರುವಿಕೆಯು ಅಗತ್ಯ. ಈ ರೀತಿಯ ಸಕಾಲದಲ್ಲಿ ಮಾಡುವ ಸವರುವಿಕೆಯಿಂದ ಗಿಡ ಅಧಿಕ ಉತ್ಪಾದನೆ ನೀಡುತ್ತದೆ. ಕೊಕ್ಕೋದ ಮೊದಲ ಟಿಸಿಲು ಒಡೆಯುವ (ಜೋರ್ಕೆಟ್) ಎತ್ತರವು 1-1.5 ಮೀಟರ್ ಎತ್ತರಕ್ಕೆ ಬರುವಂತೆ ಮಾಡುವುದರಿಂದ ಕೃಷಿ ಕಾರ್ಯಗಳಿಗೆ ಅನುಕೂಲತೆಯಾಗುತ್ತದೆ.

ಜೋರ್ಕೆಟ್ ಕೆಳಮಟ್ಟದಲ್ಲೆ ಬಂದಾಗ ಮೊಳಕೆಗಳನ್ನು ಚಿವುಟಿ ತೆಗೆಯುವುದು ಇದರಿಂದ ಆ ಪ್ರದೇಶದ ಕೆಳಗಿನಿಂದ ನೇರ ಬೆಳೆಯುವ ಚಿಗುರುಗಳು ಮೂಡಿ ಬರುತ್ತವೆ. ಚಿಗುರುಗಳಲ್ಲಿ ಉತ್ತಮವಾದ ಒಂದು ಚಿಗುರನ್ನು ಬಿಟ್ಟು ಮಿಕ್ಕವುಗಳನ್ನು ಚಿವುಟಿ ತೆಗೆಯಿರಿ. ಬೆಳೆಯಲು ಬಿಟ್ಟ ಚಿಗುರು ನಿಗದಿತ ಎತ್ತರಕ್ಕೆ ಬೆಳೆದು ಟಿಸಿಲು ಒಡೆಯುವಂತೆ ಮಾಡಿ 1-2 ಮೀಟರ್ ಎತ್ತರ ಯೋಗ್ಯವಾಗಿರುತ್ತದೆ. ಜೋರ್ಕೆಟ್ ಟಿಸಿಲುಗಳಲ್ಲಿ ಅಗತ್ಯಕ್ಕಿಂತ ಹೆಚ್ಚಿರುವ ಚಿಗುರುಗಳನ್ನು ಕತ್ತರಿಸಿ ಬುಡದಿಂದ ಬರುವ ಚೂಪಾನ್ ಚಿಗುರುಗಳನ್ನು ಕತ್ತರಿಸಿ ಬುಡದಿಂದ ಎರಡು ಕಾಂಡ ಬರದಂತೆ ನೋಡಿಕೊಳ್ಳಿ.




ಮರಗಳ ಆಕಾರ ರೂಪಿಸುವುದು

## ಸೆಪ್ಟಂಬರ

| | |
|---|---|
| ನರ್ಸರಿಯಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಕಳೆ ನಾಶ ಮಾಡುವುದು ಮತ್ತು ರೋಗದ ಬಗ್ಗೆ ನಿಗಾವಹಿಸುವುದು. ಅಗತ್ಯವಿದ್ದಲ್ಲಿ ನೀರುಣಿಸುವುದು. |
| | ಮೇ ತಿಂಗಳಲ್ಲಿ ಬಿತ್ತಿದ ಗಿಡಗಳ (4 ತಿಂಗಳ ಪ್ರಾಯದ)ನ್ನು ಕಸಿ ಮಾಡಲು ಉಪಯೋಗಿಸುವುದು. |
| | ಈ ತಿಂಗಳಲ್ಲಿ ಉತ್ತಮವಾದ ಕಾಯಿಗಳು ಲಭಿಸಿದ್ದಲ್ಲಿ ಬೀಜ ಬಿತ್ತಲು ಇವುಗಳನ್ನು ಉಪಯೋಗಿಸುವುದು. |
| | ಈಗ ಬಿತ್ತಿದ ಗಿಡಗಳು ದಶಂಬರ ತಿಂಗಳಲ್ಲಿ ಕಸಿ ಮಾಡಲು ಮೂಲ ಗಿಡವಾಗಿ ಲಭಿಸುತ್ತದೆ ಮತ್ತು ಕಸಿಯ ಅನಂತರ ಇದೇ ಕಸಿ ಗಿಡಗಳನ್ನು ಮೇ ತಿಂಗಳಲ್ಲಿ ನೆಡಲು ಉಪಯೋಗಿಸುವುದು. |
| | ಬಿತ್ತನೆಗೆ ಬೀಜಗಳನ್ನು ಸಂಗ್ರಹಿಸುವಾಗ/ಉಪಯೋಗಿಸುವಾಗ ತಾಯಿ ಮರಗಳ ಆಯ್ಕೆ ವಿಧಾನವನ್ನು ಅನುಸರಿಸುವುದು. |
| | ಮೂಲ ಗಿಡ ಮಾಡಿಕೊಳ್ಳಲು ತೊಟ್ಟೆಗಳಲ್ಲಿ ಬೀಜ ಬಿತ್ತುವ ವಿಧಾನಕ್ಕೆ ಆದ್ಯತೆ ನೀಡುವುದು. |
| ತೋಟಗಳಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಅಧಿಕ ಮಳೆ ಬೀಳುವ ಪ್ರದೇಶಗಳಲ್ಲಿ ಹಿಂಗಾರು ಮಳೆಯ ಸಮಯದಲ್ಲಿ ಗಿಡ ನೆಡುವುದು. |
| | ಎಳೆಯ ಗಿಡಗಳ ಬೆಳವಣಿಗೆಯನ್ನು ವ್ಯವಸ್ಥಿತವಾಗಿ ಆಕಾರ ಮಾಡುವುದು. |
| | ದೊಡ್ಡ ಗಿಡಗಳನ್ನು ಸವರುವುದು. |
| | ಮೂಲ ಕಾಂಡದಿಂದ ಮತ್ತು ಗೆಲ್ಲುಗಳು ಒಡೆಯುವಲ್ಲಿ ಬರುವ 'ಚೂಪಾನ್' ಚಿಗುರುಗಳನ್ನು ಕಾಲಕಾಲಕ್ಕೆ ಕತ್ತರಿಸುವುದು. |
| | ಎಳೆಯ ಗಿಡಗಳ ಬುಡಕ್ಕೆ ಮಣ್ಣು ಸೇರಿಸುವುದು ಮತ್ತು ಆಧಾರ ಕೊಡುವುದು. |
| | ಮಣ್ಣನ್ನು ಕೆದಕಿ ಗೊಬ್ಬರ ಕೊಡುವುದು. |
| | ಸಸ್ಯ ಸಂರಕ್ಷಣೆ ಮತ್ತು ಕೊಯ್ಲು ಮಾಡುವುದು. |

## ಪ್ರಬುದ್ಧ ಗಿಡಗಳ ಸವರುವಿಕೆ

### ನೈರ್ಮಲ್ಯತಾ ಸವರುವಿಕೆ

ರೋಗಗ್ರಸ್ತ ಹಾಗೂ ಅನುಪಯುಕ್ತ ಕೊಂಬೆಗಳನ್ನು ತೆಗೆದು ಗಿಡಗಳ ಆರೋಗ್ಯವನ್ನು ಕಾಪಾಡುವುದು. ಇದರಲ್ಲಿ ಕಾಂಡದಿಂದ ಹೊರಡುವ ಉಪ ರೆಂಬೆಗಳನ್ನು ತೆಗೆಯುವುದು, ಸತ್ತ ರೆಂಬೆಗಳನ್ನು ತೆಗೆಯುವುದು, ಕಾಂಡಕ್ಕೆ ಸುತ್ತಿಕೊಂಡ ಬಳ್ಳಿಗಳನ್ನು ತೆಗೆಯುವುದು, ಇರುವೆ ಗೂಡುಗಳನ್ನು ತೆಗೆಯುವುದು, ಇಲಿ - ಅಳಿಲುಗಳ ಹಾವಳಿಗೆ ತುತ್ತಾದ ಕಾಯಿಗಳನ್ನು ತೆಗೆಯುವುದು ಮುಂತಾದ ಕ್ರಮಗಳಿವೆ.

### ರಚನಾ ಸವರುವಿಕೆ

ಗಿಡದ ಹರಡುವಿಕೆಯನ್ನು ನಿಯಂತ್ರಿಸುವುದು ಮತ್ತು ಗಿಡಗಳ ಆಕಾರ ಮತ್ತು ಗಾತ್ರವನ್ನು ರಕ್ಷಿಸಲು ಈ ಸವರುವಿಕೆ ಮಾಡುವುದು.


## ಬೀಜದಿಂದ ಮಾಡಿದ ಗಿಡಗಳಲ್ಲಿ ಈ ಕೆಳಗಿನಂತೆ ಸವರುವಿಕೆ ಮಾಡುವುದು

1-2 ಮೀಟರ್ ಎತ್ತರಕ್ಕೆ ಜೋರ್ಕೆಟ ಬರುವಂತೆ ಮಾಡುವುದು. ಜೋರ್ಕೆಟ್‌ನಲ್ಲಿ 3-4 ಗೆಲ್ಲುಗಳಿಗಿಂತ ಹೆಚ್ಚಿದ್ದರೆ ಅವುಗಳನ್ನು ತೆಗೆಯುವುದು. ಗಿಡವು ಕೊಡೆಯ ಆಕಾರಕ್ಕೆ ಬರುವಂತೆ ಮಾಡುವುದು. 3.8-4 ಮೀಟರ್ ವ್ಯಾಸ ಮತ್ತು 2.7 ಮೀಟರ್ ಎತ್ತರಕ್ಕೆ ಗಿಡದ ಬೆಳವಣಿಗೆಯನ್ನು ಬಿಟ್ಟು ಹೆಚ್ಚಿನ ಭಾಗವನ್ನು ಕತ್ತರಿಸುವುದು.


## ಕಸಿ ಗಿಡಗಳಲ್ಲಿ ಸವರುವಿಕೆ

ಕಸಿಗಿಡಗಳು ನೆಟ್ಟು ಒಂದು ವರ್ಷದ ಅನಂತರ ಸವರುವಿಕೆ ಬೇಕಾಗುತ್ತದೆ. ನೇರ ಮೇಲ್ಮುಖವಾಗಿ ಬೆಳೆಯುವ ಚಿಗುರುಗಳನ್ನು ಉಳಿಸಿ ಬಾಗಿದ ಚಿಗುರುಗಳನ್ನು ಕತ್ತರಿಸುವುದು. ಗಿಡಗಳ ಹರಡುವಿಕೆ 4.2 ಮೀಟರ್ ಮತ್ತು ಎತ್ತರ 2.7 ಮೀಟರ್‌ಗೆ ಸೀಮಿತಗೊಳಿಸುವುದು. ಈ ರೀತಿ ಬೆಳೆಸುವಾಗ ಸ್ಥಳಾವಕಾಶ ಮತ್ತು ಮೂಲ ಬೆಳೆಗಳನ್ನು ಗಣನೆಗೆ ತೆಗೆದುಕೊಂಡು ಹರಡುವಿಕೆಯನ್ನು ಮತ್ತು ಎತ್ತರವನ್ನು ನಿರ್ಧರಿಸುವುದು. ಬೆಳಕಿಗೆ ತೆರೆದುಕೊಂಡಿರುವ ಎಲೆಗಳನ್ನು ಹೊತ್ತ ಗೆಲ್ಲುಗಳನ್ನು ಉಳಿಸಿ ನೆರಳಿನಲ್ಲಿರುವ ಅಥವಾ ಒಳ ಭಾಗದ ಎಲೆಗಳನ್ನು ಹೊತ್ತ ಗೆಲ್ಲುಗಳನ್ನು ಕತ್ತರಿಸುವುದು. ಸವರುವಿಕೆಯನ್ನು ಜುಲೈ-ಆಗಸ್ಟ್ ತಿಂಗಳಲ್ಲಿ ಮಾಡುವುದು. ಈ ರೀತಿಯ ಸವರುವಿಕೆಯಿಂದ ತೋಟದಲ್ಲಿ ಗಾಳಿ ಅಡ್ಡಾಡಲು, ಔಷಧಿ ಹೊಡೆಯುವುದು ಮತ್ತು ಇತರ ಕೃಷಿಕಾರ್ಯಗಳಿಗೆ ಅನುಕೂಲವಾಗುತ್ತದೆ.

- 20-30 ಎಲೆ/ಬೆಳೆಯುತ್ತಿರುವ ಕಾಯಿ ಉಳಿಸಿಕೊಂಡು ಸವರುವುದು.
- ನೇರಕ್ಕೆ ಬೆಳೆಯುವ ಚಿಗುರು (ಚೂಪಾನ್)ಗಳನ್ನು ಕಾಲಕಾಲಕ್ಕೆ ಕತ್ತರಿಸುವುದು.
- ಗಿಡಕ್ಕೆ, ಹೂಗಳಿಗೆ ಮತ್ತು ಎಳೆಯ ಕಾಯಿಗಳಿಗೆ ಕನಿಷ್ಠ ಆಘಾತವಾಗುವಂತೆ ಎಚ್ಚರ ವಹಿಸಿ ಸವರುವುದು.
- ಸವರುವ ಕೆಲಸದಲ್ಲಿ ಗಿಡದ ಗೆಲ್ಲುಗಳ ಎಲೆ ರಹಿತ ಭಾಗಕ್ಕೆ ಪೆಟ್ಟಾಗದಂತೆ ಎಚ್ಚರ ವಹಿಸುವುದು. ಸವರಿದಾಗ ಆದ ಗಾಯಗಳ ಮೂಲಕ ಶಿಲೀಂದ್ರ ರೋಗ ಬಾಧಿಸದಂತೆ ಶೇಕಡಾ 1ರ ಬೋರ್ಡೋ ಪೇಸ್ಟ್ ಹಚ್ಚುವುದು.
- ಸಾಮಾನ್ಯವಾಗಿ ಕೊಯ್ಲಿನ ನಂತರ ಸವರುವಿಕೆಯನ್ನು ನಡೆಸಲಾಗುವುದು.



ಬೀಜದಿಂದ ಮಾಡಿದ ಗಿಡಗಳ ಸವರುವಿಕೆ



ಕಸಿ ಗಿಡಗಳ ಸವರುವಿಕೆ

## ಅಕ್ಟೋಬರ

| | |
|---|---|
| ನರ್ಸರಿಯಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಕಳೆ ನಿರ್ಮೂಲನೆ ಮತ್ತು ರೋಗ ಬಾಧೆಯ ಬಗ್ಗೆ ನಿಗಾ ವಹಿಸುವುದು ಅವಶ್ಯ ಬಿದ್ದಲ್ಲಿ ನೀರುಣಿಸುವುದು |
| | ಮೇ ತಿಂಗಳಲ್ಲಿ ಬಿತ್ತಿ ಪಡೆದ ಗಿಡಗಳಿಗೆ ಕಸಿ ಮಾಡುವುದು. |
| ತೋಟಗಳಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಸವರುವಿಕೆ |
| | ಗಿಡಗಳ ಬುಡಕ್ಕೆ ಮಣ್ಣು ಸೇರಿಸುವುದು ಮತ್ತು ಆಧಾರ ಕೊಡುವುದು. |
| | ಮಣ್ಣು ಕೆದಕಿ ಎರಡನೇ ಕಂತಿನ ಗೊಬ್ಬರ ಹಾಕುವುದು. |
| | ಸಸ್ಯ ಸಂರಕ್ಷಣೆ |
| | ಕಳೆ ನಿರ್ಮೂಲನೆ |
| | ಮೇ ತಿಂಗಳಲ್ಲಿ ನೆಡಲಿರುವ ಕೊಕ್ಕೊ ಗಿಡಗಳಿಗೆ ನೆರಳು ಒದಗಿಸುವ ದೃಷ್ಟಿಯಿಂದ ಬಾಳೆಗಿಡಗಳನ್ನು ನೆಡುವುದು. |
| | ಕೊಯ್ಲು ಮುಂದುವರಿಸುವುದು. |

## ನವಂಬರ

| | |
|---|---|
| ನರ್ಸರಿಯಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಕಳೆ ನಿರ್ಮೂಲನೆ |
| | ಅವಶ್ಯಕತೆಗನುಗುಣವಾಗಿ ನೀರುಣಿಸುವುದು |
| | ಸಸ್ಯ ಸಂರಕ್ಷಣೆ |
| ತೋಟಗಳಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಹನಿ ನೀರಾವರಿ ಕೊಳವೆಗಳನ್ನು ಸ್ಥಾಪಿಸುವುದು/ಒದಗಿಸುವುದು |
| | ವಾರಕ್ಕೊಂದು ಬಾರಿ ನೀರುಣಿಸುವುದು.<br>ಗಿಡಗಳ ಸುತ್ತ ಮಣ್ಣುಗೂಡಿಸುವುದು ಮತ್ತು ಆಧಾರ ಒದಗಿಸುವುದು. |
| | ಗಿಡಗಳ ಬುಡವನ್ನು ಕೊಕ್ಕೊ ಕಾಯಿಯ ಸಿಪ್ಪೆ/ತೆಂಗಿನಸಿಪ್ಪೆ/ಕೊಕ್ಕೋ ಒಣ ಎಲೆ ಸವರಿದಾಗ ಲಭಿಸಿದ ಕೊಕ್ಕೊ ಕುಡಿಗಳಿಂದ ಹೊದೆಸುವುದು. |
| | ಸಸ್ಯ ಸಂರಕ್ಷಣೆ |
| | ಕೊಯ್ಲು |
| | ಇಲಿ ಮತ್ತು ಅಳಿಲುಗಳ ನಿಗ್ರಹ |
| | ಕಳೆ ನಿರ್ಮೂಲನೆ |

## ಇಲಿ ಮತ್ತು ಅಳಿಲುಗಳ ಬಾಧೆಯ ನಿರ್ವಹಣೆ

ಇಲಿ ಮತ್ತು ಅಳಿಲು ಕೊಕ್ಕೋ ಬೆಳೆಯನ್ನು ಬಾಧಿಸುವ ಪ್ರಮುಖ ಪ್ರಾಣಿಗಳಾಗಿವೆ. ಇಲಿಗಳು ಕೊಕ್ಕೊ ಕಾಯಿಗಳನ್ನು ತೊಟ್ಟಿನ ಸಮೀಪ ತಿಂದರೆ ಅಳಿಲು ಕಾಯಿಯ ಮಧ್ಯ ಭಾಗವನ್ನು ತಿನ್ನುತ್ತದೆ. ಇಲಿ ಎಳೆಯ ಮತ್ತು ಬಲಿತಕಾಯಿಗಳನ್ನು ತಿಂದು ಹಾಳು ಮಾಡಿದರೆ ಅಳಿಲು ಬಲಿತಕಾಯಿಗಳನ್ನು ಮಾತ್ರ ತಿನ್ನುತ್ತದೆ. ಇಲಿ ಮತ್ತು ಅಳಿಲುಗಳು ಬೀಜಗಳ ಮೇಲಿನ ಲೋಳೆಯನ್ನು ಮಾತ್ರ ತಿನ್ನುತ್ತವೆ. 10ಗ್ರಾಂ ಬ್ರೋಮಾಡಿಯೋಲೋನ್ ಮೇಣದ ಬಿಲ್ಲೆಗಳನ್ನು 10-12 ದಿನಗಳ ಅಂತರದಲ್ಲಿ ಎರಡು ಬಾರಿ ಇಟ್ಟು ಇವುಗಳ ಬಾಧೆಯನ್ನು ನಿಯಂತ್ರಿಸಬಹುದು.

ಮರದ ಅಥವಾ ತಂತಿಯ ಬೋನುಗಳಲ್ಲಿ ತೆಂಗಿನಕಾಯಿ ಹೋಳುಗಳನ್ನು ಇರಿಸಿ ಕೊಕ್ಕೋ ಗಿಡಗಳ ಮೇಲೆ ಇಟ್ಟು ಅಳಿಲುಗಳನ್ನು ಆಕರ್ಷಿಸಿ ಹಿಡಿಯಬಹುದು.



ಅಳಿಲು ಬಾಧಿತ ಕೊಕ್ಕೋ ಕಾಯಿ



ಇಲಿ ಬಾಧಿತ ಕೊಕ್ಕೋ ಕಾಯಿ

ಈ ಪ್ರಯೋಗ ಯಶಸ್ವಿಯಾಗಲು ಕೊಯ್ಲಿನ ನಿಮ್ನ ಹಂತವಾದ ಅಕ್ಟೋಬರ-ನವಂಬರ ತಿಂಗಳು ಅಥವಾ ಭತ್ತ, ಗೇರುಹಣ್ಣು ಮತ್ತು ಹಲಸಿನಹಣ್ಣು ಸಿಗದ ಕಾಲ ಉತ್ತಮ. ಸಕಾಲ ಕೊಯ್ಲಿನಿಂದವೂ ಇದರ ಪರಿಣಾಮ ಹೆಚ್ಚಾಗುವುದು.

## ಸತುವಿನ ಕೊರತೆ




ಸತುವಿನ ಕೊರತೆ ಬಾಧಿತ ಕೊಕ್ಕೊ ಎಲೆ

ಕೇರಳ, ಕರ್ನಾಟಕ ಮತ್ತು ತಮಿಳುನಾಡಿನ ಹಲವು ಕೊಕ್ಕೋ ತೋಟಗಳಲ್ಲಿ ಸತುವಿನ ಕೊರತೆಯನ್ನು ಗಮನಿಸಲಾಗಿದೆ. ಎಲೆಗಳು ಬಿಳಿಚಿಕೊಳ್ಳುವುದು ಇದರ ಪ್ರಾರಂಭದ ಲಕ್ಷಣ ಬಿಳಿಚಿಕೊಂಡ ಭಾಗ ಆರಂಭ ಹಂತದಲ್ಲಿ ಅಲ್ಲಲ್ಲಿ ಕಂಡು ಬಂದು ಕ್ರಮೇಣ ಎಲೆ ಪೂರ್ತಿ ಹರಡಿಕೊಂಡು ಎಲೆಗಳ ನರಗಳ ಅಕ್ಕಪಕ್ಕ ಮಾತ್ರ ಹಸಿರು ಬಣ್ಣ ಉಳಿದಿರುತ್ತದೆ. ಇದರಿಂದ ಬಾಧಿತ ಎಲೆಗಳು ನೆರಿಗೆಯನ್ನು ಹೊಂದಿ ವಕ್ರವಕ್ರವಾಗಿ ಮುರುಟಿಕೊಳ್ಳುತ್ತದೆ. ಎಳೆಯ ಎಲೆಗಳು ಕತ್ತಿಯಂತೆ ಬಾಗಿರುತ್ತದೆ ಮತ್ತು ಬೆಳವಣಿಗೆ ಕುಂಠಿತವಾಗಿರುತ್ತದೆ. ಗಿಡಗಳ ತುದಿ ಭಾಗ ಒಣಗಿ ಸಾಯುವ ಲಕ್ಷಣ ಕಂಡ ಬರುತ್ತದೆ. ಇದರ ಬಾಧೆ ಉಲ್ಬಣವಾದಲ್ಲಿ ಎಳೆಯ ಎಲೆಗಳು ಉದುರಿ ತುದಿ ಒಣಗಿ ಸಾಯುವುದು ಕಂಡು ಬರುತ್ತದೆ. 0.3 ಶೇಕಡಾ ಸತುವಿನ ಸಲ್ಫೇಟ್ ಮತ್ತು 0.15 ಶೇಕಡಾ ಸುಣ್ಣದ ಮಿಶ್ರಣವನ್ನು ಎಲೆಗಳ ಮೇಲೆ ಸಿಂಪಡಿಸುವುದರಿಂದ ಈ ಕೊರತೆಯನ್ನು ನಿವಾರಿಸಬಹುದು.

| | |
|---|---|
| ನರ್ಸರಿಯಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ಕಳೆ ನಿರ್ಮೂಲನೆ |
| | ದಿನ ನಿತ್ಯ ನೀರುಣಿಸುವುದು |
| | ಸಪ್ಟಂಬರ ತಿಂಗಳಲ್ಲಿ ಬಿತ್ತಿ ಪಡೆದ ಗಿಡಗಳಿಗೆ ಕಸಿ ಮಾಡುವುದು |
| | ನೆರಳು ಪರದೆಗಳನ್ನು ಉಪಯೋಗಿಸಿ ನೆರಳು ಒದಗಿಸುವುದು |
| ತೋಟಗಳಲ್ಲಿ ಕೈಗೊಳ್ಳಬೇಕಾದ ಕೆಲಸಗಳು | ವಾರಕ್ಕೊಂದು ಬಾರಿ ನೀರು ಕೊಡುವುದು |
| | ದಿನಗಳ ಆಧಾರದಲ್ಲಿ ಹನಿ ನೀರಾವರಿ ಒದಗಿಸುವುದು. |
| | ಚೂಪಾನ್ ಕತ್ತರಿಸುವುದು |
| | ಸಸ್ಯ ಸಂರಕ್ಷಣೆ |
| | ಕಳೆ ನಿರ್ಮೂಲನೆ |


ನರ್ಸರಿಯಲ್ಲಿ ನೀರುಣಿಸುವುದು


ಹನಿ ನೀರಾವರಿ

## ಸಸ್ಯಾಭಿವೃದ್ಧಿ

ಕಸಿ ಮಾಡುವುದು ಮತ್ತು ಮೊಗ್ಗು ಕಸಿ ವಿಧಾನವನ್ನು ಕೊಕ್ಕೋ ಸಸ್ಯಾಭಿವೃದ್ಧಿಯ ಕಾರ್ಯದಲ್ಲಿ ಅನುಸರಿಸಲಾಗುತ್ತದೆ. ಯಾಕೆಂದರೆ ಬೀಜಗಳಿಂದ ಪಡೆದ ಗಿಡಗಳ ಇಳುವರಿಯಲ್ಲಿ ಅಸಮತೋಲನ ಕಂಡು ಬರುತ್ತದೆ. ಅಧಿಕ ಇಳುವರಿ ತಳಿ ಎಂದು ಗುರುತಿಸಲ್ಪಟ್ಟ ತಳಿಗಳ ಗಿಡಗಳನ್ನು ಈ ವಿಧಾನದಿಂದ ಶೀಘ್ರವಾಗಿ ಅಭಿವೃದ್ಧಿ ಪಡಿಸಬಹುದು. ಸಿ.ಪಿ.ಸಿ.ಆರ್.ಐ ವಿಟ್ಲ ಸಂಸ್ಥೆಯು ಕೊಕ್ಕೋದ 'ಮೃದು ಕಾಂಡ ಕಸಿ' ಪದ್ಧತಿಯನ್ನು ಕೈಗೊಂಡಿದೆ. ಈ ವಿಧಾನದಲ್ಲಿ ಶೇಕಡಾ 85ರಷ್ಟು ಯಶಸ್ವಿಯಾಗುತ್ತದೆ. ಕೊಕ್ಕೋದಲ್ಲಿರುವ ಗುಣವು ಕಸಿವಿಧಾನದ ಯಶಸ್ಸಿಗೆ ಪೂರಕವಾಗಿದೆ. ಮೊಗ್ಗುಕಸಿ ಮಾಡಿದ ಗಿಡಗಳನ್ನು ಕೆ.ಎ.ಯು ಒದಗಿಸುತ್ತದೆ.

### ಕಸಿ ತಾಂತ್ರಿಕತೆ

- ಪಾಲಿಥೀನ್ ತೊಟ್ಟೆಗಳಲ್ಲಿ ಬೀಜ ಬಿತ್ತಿ ಬೆಳೆಸಿದ 3-4 ತಿಂಗಳ ಪ್ರಾಯದ ಗಿಡಗಳನ್ನು ಉಪಯೋಗಿಸಿ.
- ಅಧಿಕ ಇಳುವರಿ ತಳಿಯ ಮರಗಳಿಂದ 12-15 ಸೆ.ಮೀ ಉದ್ದದ ಕಸಿ ಕುಡಿಗಳನ್ನು ಸಂಗ್ರಹಿಸಿ.

- ಬೀಜಗಳಿಂದ ಮೂಡಿ ಬಂದ ಗಿಡದಂತೆ ಗಿಡ ಬಂದು ಕಡಿಮೆ ಸವರುವಿಕೆಯನ್ನು ಅಪೇಕ್ಷಿಸಿದವರು ಚೂಪಾನ್‌ಗಳಿಂದ ಕಸಿಕುಡಿಗಳನ್ನು ಉಪಯೋಗಿಸಬೇಕು. ಆದರೆ ಅಧಿಕ ಪ್ರಮಾಣದಲ್ಲಿ ಕಸಿಗಿಡಗಳು ಬೇಕಾದಾಗ ಫೇನ್ ಗೆಲ್ಲುಗಳ ಕಸಿಕುಡಿಗಳನ್ನು ಉಪಯೋಗಿಸಬೇಕು.
- ಮೂಲ ಗಿಡ ಮತ್ತು ಕಸಿಗಿಡಗಳು ದಪ್ಪ ಮತ್ತು ಪ್ರಾಯ (ಬೆಳವಣಿಗೆ)ದಲ್ಲಿ ಸಮವಾಗಿರಬೇಕು.



**ಕಸಿ ಕಟ್ಟಲು ಮೂಲ ಗಿಡದ ಮೇಲ್ಭಾಗವನ್ನು ಕಸಿ ಚಾಕುವಿನಿಂದ ಕತ್ತರಿಸಿದ್ದು**



**ಮೂಲ ಗಿಡವನ್ನು 2-3 ಸೆಂ.ಮೀ. ಉದ್ದಕ್ಕೆ ಸೀಳಿದ್ದು**



**ಕಸಿ ಕುಡಿಗಳ ಎಲೆಯನ್ನು ತೆಗೆದು 2-3 ಸೆಂ.ಮೀ. ಉದ್ದಕ್ಕೆ V ಆಕಾರದಲ್ಲಿ ಎರಡೂ ಮಗ್ಗುಲುಗಳಲ್ಲಿ ಕೆತ್ತಿರುವುದು**



**ಕಸಿ ಕುಡಿಯನ್ನು ಮೂಲ ಗಿಡದಲ್ಲಿ ಮಾಡಿದ ಸೀಳಿನಲ್ಲಿ ಜೋಡಿಸಿರುವುದು**



1.5 ಸೆಂ.ಮೀ. ಅಗಲದ ಪಾಲಿಥೀನ್ ಹಾಳೆಯಿಂದ ಬಿಗಿಯಾಗಿ ಸುತ್ತುವುದು



ಕಸಿ ಕುಡಿ ಒಣಗದಂತೆ ಪಾಲಿಥೀನ್ ಚೀಲದಿಂದ ಮುಚ್ಚಿರುವುದು



ಒಂದು ತಿಂಗಳ ಕಾಲಾನಂತರ ಕಸಿ ಜೋಡಣೆ ಹೊಂದಿರುವುದು



ಕಸಿ ಹೊಂದಿದ 5-6 ತಿಂಗಳ ತರುವಾಯ ನೆಡಲು ತಯಾರಾದ ಗಿಡ

- ಮೂಲ ಗಿಡದಿಂದ ಮೂಡಿ ಬರುವ ಚಿಗುರುಗಳನ್ನು ಆಗಾಗ ತೆಗೆಯಬೇಕು.
- ಅಕ್ಟೋಬರನಿಂದ ದಶಂಬರದವರೆಗಿನ ಕಾಲ ಕಸಿ ಕಟ್ಟುವುದಕ್ಕೆ ಯೋಗ್ಯ ಆದರೂ ಇತರ ಸಮಯದಲ್ಲಿ ಸಾಕಷ್ಟು ನೀರಿನ ವ್ಯವಸ್ಥೆ ಮಾಡಿದಲ್ಲಿ ಕಸಿಕಟ್ಟಬಹುದು.
- ಕಸಿ ಗಿಡಗಳು 2ನೇ ವರ್ಷದಿಂದ ಇಳುವರಿ ಕೊಡಲು ಪ್ರಾರಂಭಿಸುತ್ತವೆ.

- ಕೀಟರೋಗದ ಬಾಧೆಗೆ ಒಳಪಡುವ ಗಿಡಗಳಿಗೆ ಕೀಟ ರೋಗ ನಿರೋಧಕ ಶಕ್ತಿಯುಳ್ಳ ಗಿಡಗಳ ಕುಡಿಯನ್ನು ಕಸಿಕಟ್ಟಿ ಲಾಭ ಪಡೆಯಬಹುದು. ಹಳೆಯ ಮತ್ತು ಅನುತ್ಪಾದಿತ ಮರಗಳ ಗೆಲ್ಲುಗಳನ್ನು ಕಡಿದು ಪುನರುತ್ಥಾನವನ್ನು ಕಸಿಕಟ್ಟುವ ವಿಧಾನದಿಂದ ಮಾಡಬಹುದು. ಒಂದೇ ಮರದಲ್ಲಿ ಹಲವು ತಳಿಗಳ ಸಂಗ್ರಹಣೆಗೆ ಈ ವಿಧಾನವನ್ನು ಬಳಸಬಹುದು.
- ಅಧಿಕ ಇಳುವರಿ ತಳಿಗಳಾದ I-56, II-67, III-105, NC42/94 ಮತ್ತು NC45/5ನ್ನು ಮೃದು ಕಾಂಡ ಕಸಿ ವಿಧಾನದಿಂದ ವರ್ಷವೊಂದಕ್ಕೆ ಸುಮಾರು 50,000ದಷ್ಟು ಉತ್ಪಾದಿಸಿ ರೈತರಿಗೆ ಮತ್ತು ಅಭಿವೃದ್ಧಿ ನಿಗಮಗಳಿಗೆ ವಿತರಿಸಲಾಗುತ್ತದೆ.
- ನೆಡಲು ಕಸಿಗಿಡ ಯಾ ಮೊಗ್ಗು ಕಸಿ ಮಾಡಿದ ಗಿಡಗಳನ್ನು ನೆಡುವಾಗ ಎರಡು ವಿಧದ (ತಳಿ)ಗಳನ್ನು ಉಪಯೋಗಿಸುವುದು.

## ಅಧಿಕ ಇಳುವರಿ ಕೊಕ್ಕೋ ತಳಿಗಳು

ಅಧಿಕ ಇಳುವರಿಯ ಮತ್ತು ಉತ್ತಮ ಗುಣಮಟ್ಟದ ಬೀಜಗಳನ್ನು ನೀಡುವ ನಾಲ್ಕು ಸಂಕರ ತಳಿಗಳನ್ನು ಮತ್ತು ಒಂದು ಅಧಿಕ ಇಳುವರಿ ತಳಿಯನ್ನು ಸಿ. ಪಿ.ಸಿ.ಆರ್.ಐ. ಬಿಡುಗಡೆಗೊಳಿಸಿದೆ. ಇವುಗಳು ಕೇರಳ, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗೋವ ರಾಜ್ಯಗಳ ಅಡಿಕೆ, ತೆಂಗು ಮತ್ತು ತಾಳೆ ಎಣ್ಣೆ ಮರಗಳ ತೋಟಗಳಲ್ಲಿ ನೆಡುವುದಕ್ಕೆ ಯೋಗ್ಯವಾಗಿವೆ. ಇವುಗಳನ್ನು ಕಸಿ ವಿಧಾನದಲ್ಲಿ ತಯಾರು ಮಾಡಿ ಕೃಷಿಕರಿಗೆ, ತೋಟಗಾರರಿಗೆ, ಕೃಷಿ ಹಾಗೂ ತೋಟಗಾರಿಕಾ ಇಲಾಖೆಗಳಿಗೆ ಮತ್ತು ಖಾಸಗಿ ಕೃಷಿ ಸಂಸ್ಥೆಗಳಿಗೆ ಒದಗಿಸಲಾಗುತ್ತದೆ.

### ವಿಟಿಎಲ್‌ಹೆಚ್-1 (ವಿಟ್ಲಲ್ ಕೊಕ್ಕೊ ಹೈಬ್ರಿಡ್-1)

ಸಂಕರಣ-1-56x11-67
ದಪ್ಪ ಪುಷ್ಪ ಶೀಘ್ರ ಮತ್ತು ಅಧಿಕ ಇಳುವರಿ
50 ಹಳದಿ ಕಾಯಿ / ಮರ / ವರ್ಷ
ಒಣ ಬೀಜ / ಮರ / ವರ್ಷ - 1.48ಕೆಜಿ.
ಒಂದು ಬೀಜದ ತೂಕ - 1.00 ಗ್ರಾಂ.
ಇಳುವರಿ / ಹೆಕ್ಟೇರ್ - 1014 ಕೆಜಿ.
ಕೊಬ್ಬಿನ ಅಂಶ - 53.6%
ಓಟೆ -13%

### ವಿಟಿಎಲ್‌ಹೆಚ್-2 (ವಿಟ್ಲಲ್ ಕೊಕ್ಕೊ ಹೈಬ್ರಿಡ್-2)

ಸಂಕರಣ-ICS-6xSCA-6
ರೋಗ ನಿರೋಧಕ
70 ಹಳದಿ ಕಾಯಿ / ಮರ / ವರ್ಷ
ಒಣ ಬೀಜ / ಮರ / ವರ್ಷ - 1.15ಕೆಜಿ.
ಒಂದು ಬೀಜದ ತೂಕ - 1.15 ಗ್ರಾಂ
ಇಳುವರಿ / ಹೆಕ್ಟೇರ್ - 800 ಕೆಜಿ.
ಕೊಬ್ಬಿನ ಅಂಶ - 54.%
ಓಟೆ - 11%





**ವಿಟಿಎಲ್‌ಸಿಹೆಚ್-3 (ವಿಟ್ಲ ಕೊಕ್ಕೊ ಹೈಬ್ರಿಡ್-3)**

ಸಂಕರಣ-II-67 x NC -29/66
ಶೀಘ್ರ, ಅಧಿಕ ನೀರಿನ ಕೊರತೆಯಾಗುವ ಪ್ರದೇಶಗಳಿಗೆ ಸೂಕ್ತ
45 ಹಳದಿ ಕಾಯಿ / ಮರ / ವರ್ಷ
ಒಣ ಬೀಜ / ಮರ / ವರ್ಷ - 1.45ಕೆಜಿ.
ಒಂದು ಬೀಜದ ತೂಕ - 1.07 ಗ್ರಾಂ
ಇಳುವರಿ / ಹೆಕ್ಟೇರ್ - 993 ಕೆಜಿ.
ಓಟೆ - 13%



**ವಿಟಿಎಲ್‌ಸಿಹೆಚ್-4 (ವಿಟ್ಲ ಕೊಕ್ಕೊ ಹೈಬ್ರಿಡ್-4)**

ಸಂಕರಣ-II-67 x NC -42 / 94
ಶೀಘ್ರ, ಅಧಿಕ ನೀರಿನ ಕೊರತೆಯಾಗುವ ಪ್ರದೇಶಗಳಿಗೆ ಸೂಕ್ತ
40 ಕೆಂಪು ಕಾಯಿ / ಮರ / ವರ್ಷ
ಒಣ ಬೀಜ / ಮರ / ವರ್ಷ - 1.25ಕೆಜಿ.
ಒಂದು ಬೀಜದ ತೂಕ - 1.01 ಕೆಜಿ
ಇಳುವರಿ / ಹೆಕ್ಟೇರ್ - 856 ಕೆಜಿ.
ಓಟೆ - 12%



**ವಿಟಿಎಲ್‌ಸಿಸಿ - 1 (ವಿಟ್ಲ ಕೊಕ್ಕೊ ಕ್ಲೋನ್)**

NC - 45 / 53
ನೈಜೀರಿಯನ್ ಆಯ್ಕೆ
ಪರಕೀಯ / ಸ್ವಜಾತಿಯ ಮತ್ತು ವಿಜಾತಿಯ ಕಸಿಗಳಿಗೆ ಯೋಗ್ಯ
75 ಹಳದಿ ಕಾಯಿ / ಮರ / ವರ್ಷ
ಒಣ ಬೀಜ / ಮರ / ವರ್ಷ - 1.33 ಕೆಜಿ.
ಒಂದು ಬೀಜದ ತೂಕ - 1.05 ಗ್ರಾಂ
ಇಳುವರಿ / ಹೆಕ್ಟೇರ್ - 911 ಕೆಜಿ.
ಕೊಬ್ಬಿನ ಅಂಶ - 52.5%
ಓಟೆ - 12%



## ಕೊಕ್ಕೊ ಕಾಯಿ ಮತ್ತು ಬೀಜಗಳ ಮಾರುಕಟ್ಟೆ

ಕ್ಯಾಡಬರಿ, ನೆಸ್ಲೆ ಮತ್ತು ಕ್ಯಾಂಪ್ಕೊ ಸಂಸ್ಥೆಗಳು ಕೊಕ್ಕೊ ಬೆಳೆಯುವ ಎಲ್ಲಾ ಪ್ರದೇಶಗಳಲ್ಲಿ ವ್ಯವಸ್ಥಿತವಾಗಿ ಖರೀದಿ, ಸಂಸ್ಕರಣೆ ಮತ್ತು ಮಾರಾಟದ ವ್ಯವಸ್ಥೆಯನ್ನು ಹೊಂದಿರುತ್ತವೆ ಮತ್ತು ಹೆಚ್ಚಿನ ಬೆಳೆಗಾರರು ತಮ್ಮ ಉತ್ಪಾದನೆಯನ್ನು ಅಲ್ಲಿ ಮಾರುತ್ತಾರೆ.

## ಕಸಿ ಉತ್ಪಾದಿಸಲು ತಗಲುವ ವೆಚ್ಚ 50,000 ಕಸಿಗಳಿಗೆ

| ಕ್ರಮ ಸಂಖ್ಯೆ | ವಸ್ತು | ರೇಟ್ (ರೂ) | ಪ್ರಮಾಣ | ವೆಚ್ಚ (ರೂ) |
|---|---|---|---|---|
| 1. | ಛಾಯಾ ನೆರಳು ಪರದೆ (ನೆರಳಿನ ಬಲೆ) | ರೂ. 12.00/ಚ.ಮಿ. | 3000 ಚ.ಮಿ. | 36,000. |
| 2. | ಹೊಲ ಗೊಬ್ಬರ | 1000/ಮೆಟ | 50 ಮೆಟ | 50,000 |
| 3. | ಪಾಲಿಥಿನ್ ಚೀಲ 6 x 9" ಗಾತ್ರ 250 ಗೇಜ್ ದಪ್ಪ ಒಂಭತ್ತು ತೂತುಗಳೊಂದಿಗೆ | ರೂ. 70/ಕೆ. ಜಿ. | 350 ಕೆ.ಜಿ | 24,500 |
| 4. | ಪೆಪ್ಸಿ ಕವರ್‌ಗಳು (15 x 6 ಸೆ. ಮಿ) | ರೂ. 60/ಕೆ. ಜಿ. | 350 ಕೆ.ಜಿ | 21,000 |
| 5. | ಚಟ್ಟಿ ಗೊಬ್ಬರ ತಯಾರಿ (2:1:1 : ಮಣ್ಣು : ಮರಳು : ಸಾವಯವ ಹೊಲಗೊಬ್ಬರ ಮರಳಿನ ಸಂಗ್ರಹ, ಗಾಳಿಸುವಿಕೆ, ಮಿಶ್ರಣ ತುಂಬಿಸಿ ಮಡಿ ನಿರ್ಮಾಣ, ಬಿತ್ತನೆ. | ರೂ. 1.25/ಚೀಲ. | 50,000 ಚೀಲಗಳು | 62,500 |
| 6. | ಕಸಿ ಕಟ್ಟಿದ ನಂತರ ಪುನರ್ವ್ಯವಸ್ಥೆ | ರೂ. 1.10/ಗ್ರಾಫ್ಟ್ | 50,000 | 55,000 |
| 7. | ನೀರುಣಿಸುವಿಕೆ ಮತ್ತು ತಗಲುವ ಕೂಲಿ ವೆಚ್ಚ ನರ್ಸರಿ ನಿರ್ವಹಣೆಗೆ | ರೂ. 70/ವ್ಯಕ್ತಿ ಇಬ್ಬರು /ದಿನ | 1 ವರ್ಷ | 50,000 |
| | | | **ಒಂದು ವರ್ಷ ಒಟ್ಟು ವೆಚ್ಚ** | **2,99,000** |
| | **ಕಸಿಗಳ ಮಾರಾಟದಿಂದ ಆದಾಯ** | **ರೂ. 12/ಕಸಿ ಗಿಡ** | **50,000 ಕಸಿ ಗಿಡಗಳು** | **6,00,000** |

### ಗಿಡಗಳಿಗೆ ಮತ್ತು ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸಗಳು

1. ಮುಖ್ಯಸ್ಥರು, ಸಿ.ಪಿ.ಸಿ.ಆರ್.ಐ, ಪ್ರಾಂತೀಯ ಕ್ಷೇತ್ರ, ವಿಟ್ಲ, ಕರ್ನಾಟಕ 574 243

2. ಪ್ರೊಫೆಸರ್ ಮತ್ತು ಮುಖ್ಯಸ್ಥರು, ಕೆ.ಎ.ಯು ಕ್ಯಾಡಬರಿ ಕೊಕ್ಕೊ ಪ್ರೊಜೆಕ್ಟ್, ತೋಟಗಾರಿಕಾ ಕಾಲೇಜು, ವೆಲ್ಲಾನಿಕರ, ತ್ರಿಶೂರ್ 680656

3. ನಿರ್ದೇಶಕರು, ಗೇರು ಮತ್ತು ಕೊಕ್ಕೊ ಅಭಿವೃದ್ಧಿ ನಿರ್ದೇಶನಾಲಯ, ಕೊಚ್ಚಿನ್ 682 011

## ಕೊಕ್ಕೋ ಬೆಳೆಯನ್ನು ಅಡಿಕೆಯ ಜೊತೆ ಮಿಶ್ರ ಬೆಳೆಯಾಗಿ ತೋಟಗಳಲ್ಲಿ ಬೆಳೆಯಲು ತಗಲುವ ಖರ್ಚು - ವೆಚ್ಚಗಳು (ರೂಪಾಯಿ - ಪ್ರತಿ ಹೆಕ್ಟೇರ್)

| | ವಿವರಗಳು | ರೂ. / ಹೆಕ್ಟೇರ್ |
|---|---|---|
| 1. | ಇಳುವರಿ ಪೂರ್ವ ನಿರ್ವಹಣಾ ವೆಚ್ಚ ( 3ವರ್ಷ) | 50,000 |
| 2. | ತುಂತುರು ನೀರಿನ ವ್ಯವಸ್ಥೆಯ ವೆಚ್ಚ | 15,000 |
| 3. | ಒಟ್ಟು ನಿರ್ವಹಣಾ ವೆಚ್ಚ ತುಂತುರು ನೀರಿನ ವ್ಯವಸ್ಥೆ ಒಳಗೊಂಡು | 65,000 |
| 4. | ವಾರ್ಷಿಕ ನಿರ್ವಹಣಾ ವೆಚ್ಚ | 4,800 |
| 5. | ವಾರ್ಷಿಕ ನಿಗದಿತ ತುಂತುರು ನೀರಿನ ವ್ಯವಸ್ಥೆಯ ವೆಚ್ಚ | 3,000 |
| 6. | ವಾರ್ಷಿಕವಾಗಿ ಕೂಲಿಗೆ ತಗಲುವ ವೆಚ್ಚ | 13,200 |
| 7. | ವಿನಿಯೋಗಿಸಲಾದ ವಾರ್ಷಿಕ ನಿರ್ವಹಣೆ ಖರ್ಚು | 10,000 |
| 8. | ಒಟ್ಟು ವಾರ್ಷಿಕ ನಿರ್ವಹಣಾ ವೆಚ್ಚ ಇಳುವರಿಯವರೆಗೆ | 23,200 |
| 9. | ಒಟ್ಟು ಬೆಳೆಯಲು ವಾರ್ಷಿಕವಾಗಿ ತಗಲುವ (ಇಳುವರಿಯವರೆಗಿನ ವಾರ್ಷಿಕವಾಗಿ ಮೊತ್ತ) | 28,000 |
| 10. | ಒಟ್ಟು ಬೆಳೆಯಲು ವಾರ್ಷಿಕವಾಗಿ ತಗಲುವ ವೆಚ್ಚ ಇಳುವರಿಯ ವರೆಗೆ ಮತ್ತು ಹನಿ ನೀರಿನ ಸೌಲಭ್ಯವನ್ನು ಒಳಗೊಂಡು | 31,225 |
| | **ವಾರ್ಷಿಕ ಉತ್ಪಾದನೆ** | **650-1300 ಕೆಜ / ಹೆಕ್ಟೇರ್** |

### ತಯಾರಕರು

1 ಮೇನೇಜಿಂಗ್ ಡೈರೆಕ್ಟರ್, ನೆಸ್ಲೆ ಇಂಡಿಯಾ ಲಿಮಿಟೆಡ್, ಡಿಎಲ್ಎಫ್ ಸೆಂಟರ್, ಸಂಸದ್ ಮಾರ್ಗ, ನವದೆಹಲಿ 110 001

2. ಮೇನೇಜಿಂಗ್ ಡೈರೆಕ್ಟರ್, ಕ್ಯಾಡಬರಿ ಇಂಡಿಯಾ ಲಿಮಿಟೆಡ್, 19 ಬಿ.ದೇಸಾಯಿ ಮಾರ್ಗ, ಮುಂಬಯಿ 400 026

3. ಮೇನೇಜಿಂಗ್ ಡೈರೆಕ್ಟರ್, ಕ್ಯಾಂಪ್ಕೊ ಲಿಮಿಟೆಡ್, ಪಿ.ಬಿ.ನಂ.223, ವಾರಾಣಾಸಿ ಟವರ್ಸ್ ಮಿಶನ್ ರಸ್ತೆ, ಮಂಗಳೂರು, ಕರ್ನಾಟಕ - 575001.

4. ಜನರಲ್ ಮೇನೇಜರ್, ಸಿಒಆರ್‌ಪಿ, ಅಫೇರ್ಸ್, ಹಿಂದುಸ್ತಾನ್ ಲೀವರ್ ಲಿಮಿಟೆಡ್, ಮೊಹತಾ ಬಿಲ್ಡಿಂಗ್ 4, ಭಿಕಾಜಿ ಕಾಮಾ ಪ್ಯಾಲೇಸ್, ನವದೆಹಲಿ

5. ಜನರಲ್ ಮೇನೇಜರ್, ಟೆಕ್, ಬ್ರಿಟಾನಿಯ ಇಂಡಸ್ಟ್ರೀಸ್ ಲಿಮಿಟೆಡ್, 33, ಲಾರೆನ್ಸ್ ರಸ್ತೆ, ದೆಹಲಿ 110 035.





ಕೊಕ್ಕೋ ಕಾಯಿಯ ಬೆಳವಣಿಗೆಯ ವಿವಿಧ ಹಂತಗಳು









ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ
(ಭಾರತೀಯ ಕೃಷಿ ಸಂಶೋಧನಾ ಪರಿಷತ್)
ಪ್ರಾಂತೀಯ ಕ್ಷೇತ್ರ, ವಿಟ್ಲ – 574 243, ಕರ್ನಾಟಕ.

ಗೇರು ಮತ್ತು ಕೊಕ್ಕೋ ಅಭಿವೃದ್ಧಿ ನಿರ್ದೇಶನಾಲಯ
ಭಾರತ ಸರಕಾರ, ಕೃಷಿ ಮಂತ್ರಾಲಯ
ಕೊಚಿ – 682 011, ಕೇರಳ.




ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ, ಪ್ರಾಂತೀಯ ಕ್ಷೇತ್ರ, ವಿಟ್ಲ